3-30 P. M.

CLAUSE 1 ETC.

MADAM SPEAKER.—The question is :

"That Clause 1, the Long Title, the Preamble, the Enacting Formula, do stand part of the Bill."

The motion was adopted

Clause 1, the Long Title, the Preamble and the Enacting Formula were added to the Bill.

Motion to Pass

SRI H. M. CHANNABASAPPA.—I beg to move .

That the Karnataka Ayurvedic and Unani Practitioners Registration and Medical Practitioners Miscellaneous Provisions (Amendment) Bill, 1977, as passed by the Legislative Council be passed."

MADAM SPEAKAR,—The question is :

"That the Karnataka Ayurvedic and Unani Practitioners Registration and Medical Practitioners Miscellaneous Provisions (Amendment) Bill 1977, as passed by the Legislative Council be passed."

The motion was adopted and the Bill was passed

MADAM SPEAKER.—Now the House stands adjourned for half-an-hour.

The House rose at Thirty Five Minutes past Three of the Clock and reassembled at Three Minutes past four of the Clock.

(MADAM SPEAKER in the Chair)

THE BANGALORE DEVELOPMENT AUTHORITY (AMENDMENT) BILL, 1977

SRI D. DEVARAJ URS (Chief Minister).—I beg to move :

"That the Bangalore Development Authority (Amendment) Bill 1977, as passed by the Legislative Council be taken into consideration".

MADAM SPEAKER — Motion moved.

"That the Bangalore Development Authority (Amendment) Bill 1977, as passed by the Legislative Council, be taken into consideration

† SRI D. DEVARAJ URS.—Madam Speaker, this Bill seeks to amend the existing Act for the purpose of increasing the number of Members of the Board, which is in deference to the wishes of several hon'ble Members of this House. Several hon'ble Members expressed the opinion that the representation in the Board was rather inadequate and there should be exclusive provision for inclusion of Scheduled Caste Member and also a woman representation. So, this amending Bill which has been sought to provide representation to SC/ST and a woman. For that purpose we have brought an amendment to Sec. 3. Likewise there is another amendment to Sec. 62 That is so far as delegation of power to the Engineering Member and officers. We want to specify the officers as the whole time member or officer for which Sec. 52 is being amended. And third amendment is regarding the construction of houses in Bangalore City mainly. There are two agencies as the hon'ble House knows i.e. one Housing Board and the other is Bangalore Development Authority. Here, instead of each Agency having its own planning and layout to construct houses, the Amendment is to see that the lay out plan is done only by the B.D.A. so far as Bangalore Corporation area is concerned and allow even the Housing Board to construct houses only as per the lay out plan of the Bangalore Development Authority. Normally it is felt that that the B. D. A should take care of the city area and the Housing Board can concentrate its activities outside the Bangalore City. The jurisdiction as you are aware, of the Housing Board is the entire State, whereas Bangalore Development Authorities limit is within the Bangalore Corporation area which has been defined in the Act-which generally means 10-12 miles. That does not mean that the Housing Board is completely excluded from taking up the house construction activities The amendment clearly states that its activities are stipulated under the Karnataka Housing Board Act 1962 That is why so far as Bangalore city is concerned it is stated like this :"The Housing Board shall not undertake any Housing Scheme in any area within the Bangalore Metropolitan Area except in conformity with the layout plan of the B.D.A." provided that any Housing Scheme undertaken by the Karnataka Housing Board before the commencement of this Act shall be executed by the said Board in accordance with the said scheme." That is to say, before the establishment of the B D.A. the Housing Board was already in the field. It has undertaken the construction of houses in several places. Then a question came as to whether the Housing Board could continue with these activities in the city area or hand over the whole thing to the B D.A, In the previous Act all the activities of the Housing Board could be taken up by the B. D. A. When this conflict and this kind of doubt arose we thought

it fit to amend and enable as and when necessary to allow the Housing Board to construct houses and complete the work on hand under the direction of the Government.

These are the small amendments that are sought to be brought into the main Act. So, there is nothing controversal in this Bill. I therefore appeal to the House through you, Madam to accept these amendments

† ಶ್ರೀ ಎಂ ಎಸ್ ಕೃಷ್ಣನ್.—ಸಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಇಟ್ಟಿರುವ ನಗರಾಭಿವೃದ್ಧಿ ಪ್ರಾಧಿಕಾರದ ತಿದ್ದುಪಡಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಹಿಂದೆ ನುಗ್ಗೀವಾಜ್ಲೆ ಹೊರಡಿಸಿದ್ದನ್ನು ಕಾನೂನು ಮಾಡುವ ಉದ್ದೇಶದಿಂದ ಈಗ ಈ ಮಸೂದೆಯನ್ನು ತರಲಾಗಿದೆ. ಈ ನುಗ್ಗೀವಾಜ್ಲೆಯನ್ನು ಹೊರಡಿಸಿರುವುದು, ಇಲ್ಲಿ ಕೊಟ್ಟಿರುವ ಎಕ್ಸ್‌ಪ್ಲನೇಟರಿ ನೋಟ್ಸ್ ಪ್ರಕಾರ ನಾಲ್ಕನೇ ಮಾರ್ಚ್ 1977 ರಲ್ಲಿ. ಅಂದು ನುಗ್ಗೀವಾಜ್ಲೆ ಹೊರಡಿಸಿದ್ದನ್ನು ಇಂದು ಅಂದರೆ, 31ನೇ ಮಾರ್ಚ್ ತಿಂಗಳಲ್ಲಿ ಮಸೂದೆಯ ರೂಪದಲ್ಲಿ ಪಾಸ್ ಮಾಡುತ್ತಿದ್ದೇವೆ. ಹಾಗಾದರೆ, ನಾಲ್ಕನೇ ಮಾರ್ಚ ನಲ್ಲಿ ನುಗ್ಗೀವಾಜ್ಲೆಯನ್ನು ಹೊರಡಿಸಿದ ಔಚಿತ್ಯವೇನು ಮತ್ತು ಆಗ ಇದ್ದಂಥ ಬಲವಾದ ಕಾರಣ ಗಳೇನು? ಬೆಂಗಳೂರು ನಗರದಲ್ಲಿ ತಕ್ಷಣಕ್ಕೆ ವಸತಿ ಕಲ್ಪಿಸಬೇಕಾಗಿಲ್ಲ. ಅಥವಾ ಯಾವುದಾದರೂ ಪ್ರಾತಿನಿಧ್ಯದ ಬಗ್ಗೆ ಬಹಳ ಕಾತುರವಾಗಿದ್ದು, ಅದು ಅತಿಮುಖ್ಯ ಸಮಸ್ಯೆಯಾಗಿದ್ದರೆ, ಅಥವಾ ಜನರಿಗೆ ಪರಿಹಾರ ಕೊಡುವ ವಿಷಯವಾಗಿದ್ದರೆ ಆಗ ನುಗ್ಗೀವಾಜ್ಲೆ ಹೊರಡಿಸುವುದು ಔಚಿತ್ಯ ಪೂರ್ಣ ಮತ್ತು ಇಂದು ಅದನ್ನು ವಿಧಾನ ಸಭೆ ಮುಂದೆ ಮಸೂದೆ ರೂಪದಲ್ಲಿ ತರುವುದೂ ಸರಿಯೆನಿಸುತ್ತದೆ. ಆದರೆ ಆ ರೀತಿಯ ಪರಿಸ್ಥಿತಿಯೇನೂ ಇಲ್ಲಿ ಇದ್ದಂತೆ ಕಂಡುಬರುತ್ತಿಲ್ಲ. ನುಗ್ಗೀವಾಜ್ಲೆ ಹೊರಡಿಸುವ ಕಾಲಕ್ಕೆ, ಲೋಕ ಸಭೆಗೆ ಚುನಾವಣೆಗಳು ಪ್ರಕಟವಾಗಿದ್ದವು. ಆದನ್ನೇನಾದರೂ ಗಮನದಲ್ಲಿಟ್ಟುಕೊಂಡು ಬಹುಶ: ಮಾಸಲಾಗಿದೆಯೋ ಏನೋ ಎನ್ನುವ ಅನುಮಾನ ನನಗೆ ಬಂದಿದೆ. ಅಷ್ಟೇ ಅಲ್ಲದೆ, ನುಗ್ಗೀವಾಜ್ಲೆ ಹೊರಡಿಸುವ ಕಾಲಕ್ಕೆ ಈ ವಿಧಾನ ಸಭೆಯು ಸೇರಿರಲಿಲ್ಲ ಎಂಬುದೂ ಪ್ರತ್ಯಕ್ಷವಾಗಿತ್ತು. ಹಾಗಿದ್ದೂ ನುಗ್ಗೀವಾಜ್ಲೆಯನ್ನು ಹೊರಡಿಸಿ ರುವುದು ಸರಿಯೇ? ಸರಿಯಲ್ಲದುದಲ್ಲ ಎಂದು ನನ್ನ ಅಭಿಪ್ರಾಯ. ನಾನು ಈ ಪುನರ್ವಾಪವನ್ನು ಅಧಿಕಾರದ ಪ್ರಶ್ನೆಯಿಂದ ಮಾಡುತ್ತಿಲ್ಲ; ಔಚಿತ್ಯದ ಪ್ರಶ್ನೆಯಿಂದ ಮಾಡುತ್ತಿದ್ದೇನೆ. ನಮಗೆ ಅಧಿಕಾರವಿದೆ. ಜನತೆ ರಾಜ್ಯದ ಹಿತದೃಷ್ಟಿಯಿಂದ ನಾವು ಯಾವಾಗ ಬೇಕಾದರೂ ಆದನ್ನು ಉಪಯೋಗಿಸಿಕೊಳ್ಳಬಹುದೆಂದು ಸರ್ಕಾರದವರು ಹೇಳಬಹುದು. ಆದರೆ ಅಧಿಕಾರವೊಂದನ್ನೇ ನೋಡಬಾರದು; ಔಚಿತ್ಯವನ್ನೂ ನೋಡಬೇಕು. ಸರ್ಕಾರ, ಯಾವುದೇ ಒಂದು ಮಸೂದೆಯನ್ನು ಸದನದ ಮುಂದೆ ತಂದಾಗ ಅದರ ಮೇಲೆ ಟೀಕೆಗಳು ಇರುತ್ತವೆ ಮತ್ತು ಪರಿಸ್ಥಿತಿ ಸರಿಯಿರದಿದ್ದರೆ ಅನಾವಶ್ಯಕವಾದ ಟೀಕೆಗಳೂ ಬರುತ್ತವೆ. ಆದರೆ ನಾವಿಲ್ಲಿ ಅನಾವಶ್ಯಕವಾದ ಟೀಕೆಗಳನ್ನು ಮಾಡುತ್ತಿಲ್ಲ. ನುಗ್ಗೀವಾಜ್ಲೆ ಹೊರಡಿಸುವುದರ ಬದಲು, ಸ್ವಲ್ಪ ಯೋಚಿಸಿದ್ದರೆ, ನೇರವಾಗಿ ಮಸೂದೆಯನ್ನೇ ತರಬಹುದಾಗಿತ್ತು. ಹಿಂದೆ ಈ ಪರಂಪರೆ ಬಗ್ಗೆ ಇಲ್ಲಿನ ಶಾಸನ ಸಭೆಗಳಲ್ಲೂ ಮತ್ತು ಲೋಕ ಸಭೆಯಲ್ಲೂ ಚರ್ಚೆಯಾಗಿ, ಶಾಸನ ಸಭೆ ಕರೆಯುವ ಕುರಿತು ತೀರ್ಮಾನ ತೆಗೆದು ಕೊಂಡ ಮೇಲೆ ನುಗ್ಗೀವಾಜ್ಲೆಗಳನ್ನು ಹೊರಡಿಸುವುದು ರಿವಾಯಿದುದಲ್ಲವೆನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಹಾಗಿರಬೇಕಾದರೆ, ಏತಕ್ಕೋಸ್ಕರ ನುಗ್ಗೀವಾಜ್ಲೆಯನ್ನು ಹೊರಡಿಸಿದರು ಎಂದು ಮಾನ್ಯ ಮುಖ್ಯ ಮಂತ್ರಿಗಳು ವಿವರಣೆ ಕೊಡಬೇಕು. ಹಿಂದೆ, ಬೆಂಗಳೂರು ನಗರಾಭಿವೃದ್ಧಿ ಮಂಡಲಿ ಎಂದು ಇದ್ದುದ್ದನ್ನು ಈಗ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂದು ಮಾಡಿರುವುದು ಒಳ್ಳೆಯ ಉದ್ದೇಶದಿಂದಕೂಡಿದೆ. ಗೃಹ ನಿರ್ಮಾಣ ಮಂಡಲ, ನಗರ ಯೋಜನೆ ಮಂಡಲಿ, ನೀರು ನರಬರಾಜು ಮತ್ತು ಒಳಚರಂಡಿ ಮಂಡಲಿಗಳನ್ನು ವಿಕೇಂದ್ರೀಕರಿಸಿ, ಒಂದೇ ಒಂದು ಸಂಸ್ಥೆಯಿರಬೇಕು; ಏಜನ್ಸಿಯಿರಬೇಕೆಂದು ಮಾಡಿ, ಅವುಗಳಲ್ಲಿ ಅನ್ಯೋನ್ಯತೆಯನ್ನು ಉಂಟು ಮಾಡಿದ್ದಾರೆ. ಆದರೆ, ಅದು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬಂದಿದೆ? ಗೃಹನಿರ್ಮಾಣ ಮಂಡಲಿಯವರು ನಗರ ಯೋಜನೆ ಮಂಡಲಿಯವರು ಮತ್ತು ನೀರು ನರಬರಾಜು ಮತ್ತು ಒಳಚರಂಡಿ ಮಂಡಲಿಯವರು ತಮ ತಮಗೆ ಇಷ್ಟ ಬಂದ ಹಾಗೆ ಕೆಲಸ ಕಾರ್ಯ

ಗಳನ್ನು ಮಾಡುತ್ತಿದ್ದಾರೆಯೇ ಹೊರತು, ಅವರವರಲ್ಲಿ ಅನ್ಯೋನ್ಯ ಭಾವನೆಯೇ ಇಲ್ಲ ಈ ಸಂಸ್ಥೆಗಳನ್ನೆಲ್ಲಾ ಏಕೀಕರಿಸಿ ತಂದಿವ್ವ ಮೂಲ ಉದ್ದೇಶವನ್ನು ನಾವು ಏನು ಸ್ವಾಗತ ಮಾಡಿದೆವು, ಅದು ಇವತ್ತು ಫಲಕಾರಿಯಾಗಿಲ್ಲ ಈ ಎಲ್ಲ ಸಂಸ್ಥೆಗಳೂ ಕೆಲಸ ಕಾರ್ಯಗಳ ಬಗ್ಗೆ ಅನ್ಯೋನ್ಯವಾಗಿ ಪರಸ್ಪರ ಸಹಕಾರಿಗಳಾಗಿ ಕಾರ್ಯರೂಪಗೊಳಿಸುತ್ತಿಲ್ಲ. ಇದರ ಬಗ್ಗೆ ನಾನು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರವ ಅಧ್ಯಕ್ಷರೊಡನೆಯೂ ಮಾತನಾಡಿದ್ದೇನೆ. ನಾನು ಮಾತನಾಡಿದಾಗಲೆಲ್ಲ, ಅವರು ನಮ್ಮ ಮಾತು ಕೇಳುವುದಿಲ್ಲ; ಅವರಿಗೆ ತಿಳಿದ ಹಾಗೆ ಅವರು ಕೆಲಸ ಮಾಡುತ್ತಿದ್ದಾರೆ, ಎಂದು ಎಲ್ಲರೂ ಒಪ್ಪಿಕೊಳ್ಳುತ್ತಿದ್ದಾರೆ. ಈಗ ನಗರಾಭಿವೃದ್ಧಿ ಪ್ರಾಧಿಕಾರದವರು ಒಳಚರಂಡಿ ಮಾಡಲಿಯವರಿಗೆ ಎಂದು ಕಡೆ ಚರಂಡಿ ತೆಗೆಯಲು ಅದೇಶ ಕೊಟ್ಟರೆ, ಅವರು ಅದನ್ನು ಪರಿಪಾಲಿಸುವುದಿಲ್ಲ ಈ ಯೋಜನೆ ಎಲ್ಲೋ ಇರುತ್ತದೆ ಅದರೆ, ಇವರು ಇನ್ನೊಂದು ಕೆಲಸ ಮಾಡುತ್ತಿರುತ್ತಾರೆ, ಇಂಥಾ ನಿದರ್ಶನಗಳೂ ಹಲವಾರಿವೆ. ನನ್ನ ಕ್ಷೇತ್ರದ ವಿಚಾರವನ್ನೇ ಬೇಕಾದರೆ ಹೇಳುತ್ತೇನೆ. ಯಶವಂತಪುರ, ಬಹಳಷ್ಟು ಕಾರ್ಮಿಕರು ಮತ್ತು ಬಡವರು ಇರುವ ಕ್ಷೇತ್ರ. ಆ ಕ್ಷೇತ್ರದಲ್ಲಿ ಇನ್ನೂ ಕೂಡ ನರಿಯಾದ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ ಮತ್ತು ಒಳಚರಂಡಿ ವ್ಯವಸ್ಥೆಯು ಆಗಿಲ್ಲ. ಪ್ರಾಧಿಕಾರ ಮಾಡಿದ ಮೊದಲು ಯಾವ ರೀತಿ ಪರಿಸ್ಥಿತಿ ಇತ್ತು ಈಗಲೂ ಅದೇ ಪರಿಸ್ಥಿತಿ ಇದೆ. ಇದರ ಬಗ್ಗೆ ನಾನು ಸಂಬಂಧ ಪಟ್ಟವರಲ್ಲಿ ಕೇಳಿದಾಗ, ಯೋಜನೆ ತಯಾರಿಸುವವರೆಗೆ ಮಾತ್ರ ನಾವು ಅದನ್ನು ಕಾರ್ಯರೂಪಕ್ಕೆ ತರುವ ಅಧಿಕಾರ ಬೇರೆಯವರಿಗಿದೆ ಎಂದು ಹೇಳುತ್ತಾರೆ. ಹೀಗೆ ಒಂದಲ್ಲ ಒಂದು ನೆಪವ ಹೇಳುವುದೇ ವಿನಹ ಒಂದು ಕಡೆಯೂ ಕೆಲಸಗಳು ನಡೆಯುತ್ತಿಲ್ಲ. ಇವತ್ತು ಬೆಂಗಳೂರು ನಗರಕ್ಕೆ, ಅದರ ಸುತ್ತಮುತ್ತಲಿರುವ ಸುಮಾರು 36 ಹಳ್ಳಿಗಳನ್ನು ಸೇರಿಸಿಕೊಂಡಿದ್ದಾರೆ. ಆದರೆ, ಅಲ್ಲಿ ಯಾವ ಕೆಲಸವೂ ಪೂರ್ತಿಯಾಗಿ ನಡೆದಿಲ್ಲ, ಎಲ್ಲ ಅರ್ಧಂಬರ್ಧ ನಡೆದಿವೆ. ಸ್ಥಳೀಯ ಜನರು ಶಾಸಕರನ್ನೋ ಮತ್ತೊಬ್ಬರನ್ನೋ ಹೋಗಿ ಬತ್ತಾಯ ಮಾಡಿದರೆ ಒಂದು ರಸ್ತೆಗೆ ನಲ್ಲಿ ಹಾಕಿದರೆ ಇನ್ನೊಂದು ರಸ್ತೆಗೆ ಪೈಪನ್ನು ಎಳೆದು ಬಿಡುತ್ತಾರೆ. ಆ ಮೇಲೆ, ಅದನ್ನು ಬಿಟ್ಟುಬಿಡುತ್ತಾರೆ. ಪರಿಸ್ಥಿತಿ ಹೀಗಿರಬೇಕಾದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಇವೆಯೋ ಇಲ್ಲವೋ ಎಂದು ನಾನು ಪ್ರಶ್ನಿಸ ಬೇಕಾಗಿದೆ. ಇದು ಇಲ್ಲದೇ ಹೋದರೆ ಇಷ್ಟೊಂದು ಅಧಿಕಾರವನ್ನು ಏತಕ್ಕೆ ಇದಕ್ಕೆ ಕೊಡ ಬೇಕೆಂದು ನನಗೆ ಅರ್ಥವಾಗುತ್ತಿಲ್ಲ ಬೆಂಗಳೂರು ನಗರ ಬೆಳವಣಿಗೆಗೆ ಮಾನ್ಯ ಮುಖ್ಯ ಮಂತ್ರಿ ಯವರು, ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಇದರ ಜೊತೆಗೆ, ಅವರು ನಾನು ಹೇಳಿದ ಈ ಮುಖ್ಯ ಅಂಶಗಳನ್ನೂ ಗಮನಿಸಬೇಕೆಂದು ಹೇಳುತ್ತೇನೆ ಎಲ್ಲಾ ಸಂಸ್ಥೆಗಳನ್ನೂ ಕ್ರೋಢೀಕರಿಸಿ, ಸಮನ್ವಯ ವ್ಯವಸ್ಥೆ ಮಾಡಿದ್ದರೂ, ಅನೇಕ ದೂರುಗಳು ಇನ್ನೂ ಬರುತ್ತಿವೆ. ಈಗ ಅವುಗಳ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಬೇಡಿಕೆ ಪ್ರಸ್ತಾಪ ಬಂದಾಗ ಬೇಕಾ ದಷ್ಟು ವಿಷಯಗಳನ್ನು ಹೇಳಬೇಕೆಂದಿದ್ದೇನೆ.

ಈ ಮಸೂದೆಯಲ್ಲಿ ಅತಿ ಮುಖ್ಯವಾಗಿರುವುದು ಪ್ರಾತಿನಿಧ್ಯದ ವಿಚಾರ. ಇದರಲ್ಲಿ ಇರುವುದು ಎರಡು. ಆ ಎರಡರಲ್ಲಿ ಒಂದು ಮಹಿಳೆಗೆ ಇನ್ನೊಂದು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗದ ವರಿಗೆ ಎಂದು ಇದೆ. ಇದರಲ್ಲಿ ಯಾರದು ಭಿನ್ನಾಭಿಪ್ರಾಯವಿಲ್ಲ, ಇದಕ್ಕೆ ಪರಿಶಿಷ್ಟ ವರ್ಗದ ಮತ್ತು ಜಾತಿಯವರನ್ನು ತೆಗೆದುಕೊಂಡರೆ, ಕಾರ್ಮಿಕ ವರ್ಗದವರನ್ನು ಏತಕ್ಕೆ ತೆಗೆದುಕೊಳ್ಳುವುದಿಲ್ಲ? ಈ ಬಗ್ಗೆ ನಾನು ಮೊದಲಿನಿಂದಲೂ ಒತ್ತಾಯಮಾಡುತ್ತಾ ಬಂದಿದ್ದೇನೆ. ಅಲ್ಲದೆ,ಈಗ ಒಂದು ತಿದ್ದುಪಡಿ ಯನ್ನೂ ತಂದಿದ್ದೇನೆ ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನು ಇದರಲ್ಲಿ ತೆಗೆದುಕೊಳ್ಳಬೇಕು. ಇದರಲ್ಲಿ ಎಲ್ಲೂ ಕೂಡ ಇಂಥ ಒಂದು ವರ್ಗಕ್ಕೆ, ಇಂಥ ಒಂದು ಗುಂಪಿಗೆ ಕೊಡುತ್ತೇವೆಂದು ಸ್ಪಷ್ಟ ವಾಗಿ ಹೇಳಿಲ್ಲ. ಆರ್ಕಿಟೆಕ್ಚರ್ಸ್ ಮಾತ್ರ ಇದೆ, ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. 'to others' ಎಂದು ಇದೆ, ಅದರ ಬಗ್ಗೆ ಯಾರನ್ನು ಬೇಕಾದರೂ ಸೇರಿಸಿಕೊಳ್ಳಬಹುದು. ನನ್ನ ಅಭಿಪ್ರಾಯ ಏನು ಎಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಗೂ ಹೆಂಗಸರನ್ನು ತೆಗೆದು ಕೊಳ್ಳುವ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಬೆಂಗಳೂರು ನಗರ ತಮಗೆ ಗೊತ್ತಿರುವ ಹಾಗೆ ಬಹಳ ಜನ ಕಾರ್ಮಿಕರು ಇರುವ ನಗರ. ದೊಡ್ಡ ದೊಡ್ಡ ಕೈಗಾರಿಕೆಗಳು ಬರುತ್ತಿವೆ ಬಂದಿವೆ. ನಗರಾ ಭಿವೃದ್ಧಿ ಮಂಡಳಿಯು ಕಲಸವಾದರೂ ನಣ್ಣಪುಟ್ಟ ಕಾರ್ಮಿಕರಿಗೆ ಜಾಗಗಳನ್ನು ಒದಗಿಸಿಕೊಡು ವುದು, ಮನೆಗಳನ್ನು ಕಟ್ಟಿಸಿಕೊಡುವುದು ಆಗಿದೆ. ಹಿಂದೆಯೂ ಕೂಡ ಬೆಂಗಳೂರು ಡೆವಲಪ್

ಮೆಂಟ್ ಅಥಾರಿಟಿ ಬಿಲ್ ಬಂದಾಗ ಕೂಡ ಈ ಪ್ರಶ್ನೆಯನ್ನು ಎತ್ತಿದ್ದೇನೆ. ಮೂರು ಲಕ್ಷ ಜನ ಕಾರ್ಮಿಕರು ಇರುವಂತ ಈ ನಗರದಲ್ಲಿ ಕಾರ್ಮಿಕ ವರ್ಗಕ್ಕೆ ಒಂದು ಪ್ರಾತಿನಿಧ್ಯ ಕೊಡುವುದು ಸರಿಯಾದುದು ಅಲ್ಲವೇ ಎಂದು ಕೇಳಿದ್ದೇನೆ, ಅದಿನಿಂದಲೂ ಅವರ ಬಗ್ಗೆ ಒತ್ತಾಯ ಮಾಡಿಕೊಂಡು ಬಂದಿದ್ದೇನೆ. ಕಾರ್ಮಿಕ ಪ್ರತಿನಿಧಿಗಳು ಅಂದರೆ ಒಂದು ಬೋರ್ಡಿನಲ್ಲಿ ಐಟಿಸಿ ಕಾರ್ಮಿಕರನ್ನು ಸೇರಿಸಿದ್ದಾರೆ. ಸ್ಪೆಸಿಫಿಕ್ ಆಗಿ ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನೇ ಸೇರಿಸಬೇಕೆಂದು ನನ್ನ ಅಭಿಪ್ರಾಯ. ಇದರಿಂದ ಹೌಸಿಂಗ್ ಬೋರ್ಡುಗಳಲ್ಲಿ ಹೆಚ್ಚು ಅನುಕೂಲ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಾರ್ಮಿಕ ವರ್ಗ ನಮ್ಮ ದೇಶದ ಬೆನ್ನೆಲುಬು ಎಂದು ಹೇಳುತ್ತೀರಿ, ಕಾರ್ಯರೂಪಕ್ಕೆ ಬಂದಾಗ ಏಕಕ್ಕೆ ಮರೆಯುತ್ತೀರೋ ನನಗಂತೂ ಗೊತ್ತಿಲ್ಲ. ಕರ್ನಾಟಕದಲ್ಲಿ ಅನೇಕ ಬೋರ್ಡುಗಳನ್ನು ಮಾಡಿದ್ದೀರಿ, ಯಾವುದರಲ್ಲೂ ಕಾರ್ಮಿಕ ಪ್ರತಿನಿಧಿಗಳು ಇಲ್ಲ. ಹೌಸಿಂಗ್ ಬೋರ್ಡು ಬಂದಮೇಲೆ ಬಿಟ್ಟರೆ ಬೇರೆ ಯಾವುದರಲ್ಲೂ ಕೇರಿಲ್ಲ. ಬಿಸಿನೆಸ್ ಮ್ಯಾನ್ ಇರುತ್ತಾನೆ, ಛೇಂಬರ್ಸ್ ಪ್ರತಿನಿಧಿಗಳು ಇರುತ್ತಾರೆ ಕೈಗಾರಿಕೋದ್ಯಮಿಗಳು ಇರುತ್ತಾರೆ. ಆದರೆ ಕಾರ್ಮಿಕ ಪ್ರತಿನಿಧಿಗಳು ಮಾತ್ರ ಇರುವುದಿಲ್ಲ. ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಯಾಕೆ ಹಾಕುತ್ತೀರಿ ? ಅತಿ ಮುಖ್ಯವಾದುದು ಸೇರಿಸಿಲ್ಲ, ಆ ದೃಷ್ಟಿಯಿಂದ ನಾನು ಒತ್ತಾಯ ಮಾಡುವುದೇನೆಂದರೆ, ಟ್ರೇಡ್ ಯೂನಿಯನ್ ಪ್ರತಿನಿಧಿಗಳನ್ನೇ ಸೇರಿಸಬೇಕೆಂದು ಬೇಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಕರ್ನಾಟಕ ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟುಬೇಕು, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ಒಳಗೆ ಕಟ್ಟುವುದಕ್ಕೆ ಅವಕಾಶ ಇರಬೇಕು. ಹೀಗೆಯೆ ಅಕ್ಕಪಕ್ಕದ ಹೌಸಿಂಗ್ ಬೋರ್ಡಿನವರು ಇಲ್ಲಿ ಕಟ್ಟುವುದಕ್ಕೆ ಅವಕಾಶ ಇರಲಿಲ್ಲ. ಅವರ ಕೆಲಸವೂ ನಡೆಯುತ್ತದೆ, ಇವರ ಕೆಲಸವೂ ನಡೆಯುತ್ತದೆ, ಜನಸಂಖ್ಯೆ ಮಾತ್ರ ಬಾಸ್ಕಿಯಾಗುತ್ತದೆ. ಈ ಪ್ರಶ್ನೆ ಅತಿ ಮುಖ್ಯವಾದುದು, ಏಕೆಂದರೆ ಬಡವರು, ಕೂಲಿ ನಾಲಿ ಮಾಡುವವರು, ಕಾರ್ಮಿಕರು ಹೆಚ್ಚಾಗಿರುವ ಈ ನಗರದಲ್ಲಿ ಪ್ರಾತಿನಿಧ್ಯ ಕೊಡಲೇಬೇಕೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಮುಖ್ಯಮಂತ್ರಿಗಳು ಪ್ರಗತಿದಾಯಕವಾದ ಅಭಿಪ್ರಾಯವನ್ನು ಇಟ್ಟುಕೊಂಡಿರುವವರು ಈ ವಿಚಾರವನ್ನು ಒಪ್ಪಿಕೊಳ್ಳುತ್ತಾರೆ, ಆ ದೃಷ್ಟಿಯಿಂದ ನಾನು ಒಂದು ತಿದ್ದುಪಡಿ ಕೂಡ ತಂದಿದ್ದೇನೆ.

ಮುಖ್ಯವಾದ ಅಂಶ ಏನೆಂದರೆ ಈ ತಿದ್ದುಪಡಿ ಮಸೂದೆಯಲ್ಲಿರುವುದು ಹೌಸಿಂಗ್ ಬೋರ್ಡಿಗೆ ಇದುವರೆಗೆ ಇಲ್ಲಿ ಮನೆ ಕಟ್ಟುವುದಕ್ಕೆ ಅವಕಾಶ ಇರಲಿಲ್ಲ, ಈಗ ಅದು ಇದೆ. ಮನೆ ಕಟ್ಟಿಸುವುದು ಅತಿ ಮುಖ್ಯವಾದ ಕೈಗಾರಿಕೆಯಾಗಿ ಪರಿಗಣಿಸಬೇಕು. ಯಾವ ದೇಶ ಸಮತಾವಾದ ತತ್ವವನ್ನು ಒಪ್ಪಿಕೊಂಡಿದೆಯೋ ಅಲ್ಲಿ ಹೌಸಿಂಗ್ ಬಗ್ಗೆ ಅತಿ ಮುಖ್ಯವಾಗಿ ಆದ್ಯತೆ ಪಡೆಯಬೇಕು. ಆದ್ಯತೆ ಪಡೆಯಬೇಕಾದರೆ, ಕಾರ್ಯಗತ ಮಾಡಬೇಕಾದರೆ, ಸರಿಯಾದಂತ ಏಜನ್ಸಿ ಇರಬೇಕು. ಇಲ್ಲಿ ಒಂದು ತೊಂದರೆ ಬರಬಹುದು. ಏನೆಂದರೆ, ಎರಡು ಏಜನ್ಸಿ ಇರುವುದರಿಂದ ಒಂದಕ್ಕೊಂದಕ್ಕೆ ಕಾಂಪ್ಲಕ್ಸ್ (ತಿಕ್ಕಾಟ) ಬರುವುದಿಲ್ಲವೇ ? ಹೌಸಿಂಗ್ ಬೋರ್ಡಿನವರು ಮನೆಗಳನ್ನು ಕಟ್ಟಿಸುತ್ತಾರೆ, ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಮನೆಗಳನ್ನು ಕಟ್ಟಿಸುತ್ತಾರೆ ಹಡ್ಕೋ ಸ್ಕೀಮಿನ ಪ್ರಕಾರ ಮನೆಗಳನ್ನು ಕಟ್ಟಿಸುತ್ತಾರೆ. ಎರಡು ಏಜನ್ಸಿ ಇರುವುದು ಸರಿಯೇ ? ನನ್ನ ಸ್ಪಷ್ಟವಾದ ಅಭಿಪ್ರಾಯ ಏನು ಎಂದರೆ, ಒಂದೇ ಏಜನ್ಸಿ ಇದ್ದು ಎಲ್ಲಾ ಫಂಡ್ಸನ್ನು ಅಪರಿಗೇ ಕೊಡಬೇಕು. ಲೇಔಟ್ ಮತ್ತು ಪ್ಲಾನಿಂಗ್‌ಗೆ ಅನುಗುಣವಾಗಿ ಮನೆಗಳನ್ನು ಕಟ್ಟಿಸಬೇಕು. ಬರೀ ಏನಿಜ್ಞ ಮಾಡಿದರೆ ಸಾಲದು ಫಂಡ್ಸ್ ಅತಿ ಮುಖ್ಯವಾದುದು. ಇಂಡಸ್ಟ್ರಿಯಲ್ ವರ್ಕರ್ಸ್ ಬೆಂಗಳೂರು ಮತ್ತಿತರ ನಗರಗಳಲ್ಲಿ ಹಾಸ್ಟಿಯಿದ್ದು, ಬಾಡಿಗೆ ಸಕ್ರಮಪಟ್ಟಿ ಹಾಗಿರುವುದರಿಂದ ಮನೆಗಳನ್ನು ಸುಲಭವಾಗಿ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಸರ್ಕಾರದ ಅಡಳಿತಕ್ಕೆ ಒಳಪಟ್ಟಿರುವ ಕೆಲವು ಕೈಗಾರಿಕೆಗಳು 10-12 ಪರ್ಸೆಂಟ್ ಮನೆಗಳನ್ನು ಕಟ್ಟಿಸಿವೆ ಖಾಸಗೀ ಕೈಗಾರಿಕೆಯವರು ಮನೆಗಳನ್ನು ಕಟ್ಟಿಸಿಲ್ಲ, ನಮ್ಮ ದೇಶದ ಮಾಲೀಕರಿಗಳಿಗೆ ಬಂಡವಾಳ ಉಪಯೋಗ ಮಾಡಿಕೊಂಡಿಲ್ಲ ವೆಂದು ಕೇಂದ್ರ ಹಾಗೂ ರಾಜ್ಯ ಸರ್ಕಾರದವರೂ ಹೇಳಿದ್ದಾರೆ. ಸಬ್ಸಿಡಿ ಕೊಟ್ಟರೂ ಉಪಯೋಗ ಮಾಡಿಕೊಂಡಿಲ್ಲ ಇವರ ಬಗ್ಗೆ ಒಂದು ಆದ್ಯತೆ ಕೊಟ್ಟು ಹೌಸಿಂಗ್‌ಗಾಗಿಯೇ ಸ್ಪೆಷಲ್ ಫಂಡ್ ಮಾಡಬೇಕೆಂದು ಹೇಳುತ್ತೇನೆ. ಮಾಲೀಕರ ಮೇಲೆ ಸೆಸ್ ಹಾಕುವುದು ಒಳ್ಳೆಯದೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ಫಂಡ್ಸನ್ನು ಹೌಸಿಂಗ್ ಬೋರ್ಡಿನವರು ಕೈಗಾರಿಕಾ ಕಾರ್ಮಿಕರಿಗೆ ಉಪಯೋಗ ಮಾಡಿ ನಗರಗಳಲ್ಲಿ ಮನೆಗಳನ್ನು ಕಟ್ಟಿಸುವುದಕ್ಕೆ ಮುಂದೆ ಬರಬೇಕು. ಇದರ ಬಗ್ಗೆ

ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡುತ್ತಾರೆಂದು ನಾನು ನಂಬುತ್ತೇನೆ. ಎರಡು ಏಜೆನ್ಸಿಗಳಿದ್ದು ಚೆಕ್ಸ್ ಮತ್ತು ಕೌಂಟರ್ ಚೆಕ್ಸ್ ಇದ್ದು ಒಂದಕ್ಕೊಂದಕ್ಕೆ ವಿರೋಧಾಭಾಸವಾಗದ ಹಾಗೆ ನೋಡಿಕೊಳ್ಳುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಎಸ್ಟಿಮೇಟ್ಸ್‌ನ್ನು ಇಂಜಿನಿಯರ್ಸ್ ಬಿಲ್ಡಿಂಗ್ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ನೋಡಿಕೊಳ್ಳಬೇಕೆಂದು ಮಾಡಿರುವುದು ನ್ಯಾಯವಾದ ಎಸ್ಟಿಮೇಟ್ ಸರಿಯಾಗಿ ಸ್ಕ್ರುಟಿನೈಸ್ಡ್ ಮಾಡುವ ವಿಚಾರವೇ ಇರಲಿಲ್ಲ. ಸ್ಕ್ರುಟಿನೈಸ್ಡ್ ಮಾಡಲೇ ಇರುವುದರಿಂದ ಅನೇಕ ತಕರಾರುಗಳು ಬಂದಿವೆ. ಯೋಜನೆಗಳು ಸರಿಯಾಗಿ ಕಾರ್ಯಗತವಾಗದೆ ಅರ್ಧಂಬರ್ಧ ಆಗುತ್ತಿದ್ದವು. ಈಗ ಮಾಡಿರುವುದು ಸರಿಯಾಗಿದೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ ಇಷ್ಟು ಮಾತ್ರ ಹೇಳಿ, ಮುಖ್ಯವಾಗಿ ಎರಡು ಅಂಶಗಳ ಬಗ್ಗೆ ಅಂದರೆ ಕಾರ್ಮಿಕ ವರ್ಗದ ಪ್ರತಿನಿಧಿಗಳ ಗಮನ ಕೊಡಬೇಕೆಂದೂ ನಾನೂ ತಂದಿರುವ ತಿದ್ದುಪಡಿಯನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರೆಂದು ತಿಳಿಸಿ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀ ಕೆ.ಆರ್. ಶ್ರೀನಿವಾಸಲು ನಾಯುಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷಣಿಯರೇ, ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕಂಥ ಈ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಅಮೆಂಡ್‌ಮೆಂಟ್ ಬಿಲ್ಲು ಏಂದೆ ? ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ತಮಗೆ ಗೊತ್ತಿರುವ ಹಾಗೆ ಕೋ ಆರ್ಡಿನೇಷನ್ ಇಲ್ಲ ಎನ್ನುವ ಮೂಲ ಉದ್ದೇಶದಿಂದ ಈ ಬಿಲ್ಲನ್ನು ತೆಗೆದುಕೊಂಡು ಬಂದಿದೆ ಹಿಂದೆ ನಮ್ಮಲ್ಲಿ ಸಿ.ಐ.ಟಿ.ಬಿ ಒಂದು ಇತ್ತು. ಈಗ ಡೆವ್ಲಪ್‌ಮೆಂಟ್ ಅಥಾರಿಟಿಗಳಿಗೆ Delhi Development ಬೋರ್ಡ್ ನೋಡಿಕೊಂಡು ಬಂದ ಮೇಲೆ ಒಂದು ಕೋ ಆರ್ಡಿನೇಷನ್ ಇರಬೇಕೆಂಬ ಮೂಲ ಉದ್ದೇಶದಿಂದ ಈ Act ಮಾಡಿದ್ದಾರೆ. ಹೌಸಿಂಗ್ ಬೋರ್ಡ್, ವಾಟರ್ ಬೋರ್ಡ್, ಎಲೆಕ್ಟ್ರಿಸಿಟಿ ಬೋರ್ಡ್, ಕಾರ್ಪೊರೇಷನ್ ಇತ್ಯಾದಿಗಳನ್ನು ಒಳಗೊಂಡ ಬೋರ್ಡಿದೆ. ಮತ್ತು ನಾನ್ ಆಫಿಷಿಯಲ್ ಮೆಂಬರ್‌ಗಳಿಗೂ ಪ್ರಾತಿನಿಧ್ಯ ಕೊಟ್ಟಿದೆ, ಇದರ ಬಗ್ಗೆ ಎಲ್ಲಾ ನಮ್ಮ ಅಮೆಂಡ್‌ಮೆಂಟ್‌ನಲ್ಲಿ ಕ್ಲಿಯರ್ ಆಗಿ ಹೇಳಿದೆ. ಇದರಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳಿವೆ, ಒಂದನೆಯದು ರೆಪ್ರಸೆಂಟೇಟಿವ್ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿದರು. It should be truly a representitive of official and non-official body ಹೆಂಗಸರು ಮತ್ತು Schedule caste ಮತ್ತು Labour ಇತ್ಯಾದಿ ಎಂದು ಹಾಕಿದ್ದಾರೆ. ಮಾನ್ಯ ಕೃಷ್ಣನ್‌ರವರು ಲೇಬರ್ಸ್‌ಗಳಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ಕೇಳುತ್ತಿದ್ದರು. ಅವರಿಗೆ ಪ್ರಾತಿನಿಧ್ಯ ಕೊಟ್ಟರೆ ತಪ್ಪಾಗಲಾರದು ಎಂದು ಹೇಳುತ್ತೇನೆ. ಕಾರ್ಮಿಕರ ರೆಪ್ರಸೆಂಟೇಟಿವ್ ಇರಬೇಕು ಎನ್ನುವುದರಲ್ಲಿ ನಾನು ಒಬ್ಬ. "ಎಸ್ಟಿಮೇಟ್" ಇಂಜಿನಿಯರ್ ಮೆಂಬರುಗಳಿಗೆ ಪಿ.ಡಬ್ಲ್ಯು.ಡಿ.ನಲ್ಲಿ ಇದ್ದ ಹಾಗೆ ಇಲ್ಲಿಯೂ ಅಧಿಕಾರ ಇರಬೇಕು ಎಂದು ಹೇಳಿದ್ದಾರೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಪರ್‌ಪ್ಯೂನಲ್ಲಿ ಹೌಸಿಂಗ್ ಬೋರ್ಡ್ ಬಂದಿತ್ತು. ಮಾನ್ಯ ಕೃಷ್ಣನ್‌ರವರು ಮಾತನಾಡುತ್ತಾ ಎರಡು ಏಜೆನ್ಸಿಗಳು ಏತಕ್ಕೆ ಬೇಕು ಎಂದು ಹೇಳಿದರು. ಇದರಿಂದ ಏನು ತೊಂದರೆಯಾಗುವುದಿಲ್ಲ. ಈಗ ಇರತಕ್ಕ ಆಕ್ಟ್‌ನಲ್ಲಿ ಕ್ಲಿಯರ್ ಆಗಿ ಹೇಳಿದೆ. ಮಾಡಿಫೈಡ್ ಡೆವಲಪ್‌ಮೆಂಟ್ ಪ್ಲಾನ್ ಆಫ್ ಬೆಂಗಳೂರು ನಮ್ಮಾರು ಹತ್ತು ಕಿಲೋ ಮೀಟರ್ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಸೇರಿರುತ್ತದೆ ಶ್ರೀಮಾನ್ ದಿವಂಗತ ಮಾಧುರಾಯರ committee ಮೇರೆಗೆ ಇನ್‌ಸ್ಟಿಟ್ಯೂಷನಲ್ ಜೋನ್, ರೆಸಿಡೆನ್ಷಿಯಲ್ ಜೋನ್, ಕಮರ್ಷಿಯಲ್ ಜೋನ್, ಇಂಡಸ್ಟ್ರಿಯಲ್ ಜೋನ್ ಯಾವುದು ಎಂದು ಬಹಿರಂಗವಾಗಿ ಹೇಳಬಹುದು. ಜೊತೆಗೆ ತಮಗೆ ಗೊತ್ತಿರುವ ಹಾಗೆ ಅರ್ಬನ್ ಆರ್ಟ್ಸ್ ಕಮಿಷನ್ ಎಂಬ ಒಂದು ಇದೆ. ಈ ರೀತಿ 5-6 ಜನಗಳ ಏಜೆನ್ಸಿ ಕೆಲಸ ಮಾಡುವುದರಿಂದ ಮನೆಗಳ ಪ್ರಾಬ್ಲಮ್ಸ್‌ಗೆ ತೊಂದರೆಯಾಗುವುದಿಲ್ಲ ಎಂದು ನಾನು ನಂಬಿದ್ದೇನೆ. ತಮಗೆ ಗೊತ್ತಿರುವ ಹಾಗೆ ಬೆಂಗಳೂರು ನಗರದಲ್ಲಿ 20 ಲಕ್ಷ ಜನರು ಇದ್ದು, ಒಂದು ಲಕ್ಷದ ಐವತ್ತಾರು ಸಾವಿರ ಮನೆಗಳು ಮಾತ್ರ ಇದೆ. ಇನ್ನೊತ್ತು 35 ಕೋಟಿ ರೂಪಾಯಿ ಖರ್ಚಿನಿಂದ ಭಗೀರಥ ಪ್ರಯತ್ನ ಮಾಡಿ 27 ಟಿಂಗಳಲ್ಲಿ ಕಾವೇರಿ ನೀರನ್ನು ಬೆಂಗಳೂರಿಗೆ

ತಂದಿದ್ದೇವೆ. ಈಗ ಅದಕ್ಕೆ 4 ಕೋಟಿ ರೂಪಾಯಿ ಬರೀ ಬಡ್ಡಿ ಕೊಡಬೇಕಾಗಿದೆ. ಇದು ಎಲ್ಲಾ ಕೋ ಆರ್ಡಿನೇಷನ್ ಇರುವುದರಿಂದ ಸಾಧ್ಯ ಎಂದು ಹೇಳುತ್ತೇನೆ. ಬೆಂಗಳೂರು ನಗರಕ್ಕೆ ನೀರಿನ ಅವಶ್ಯಕತೆ ಮತ್ತು ಆಭಾವ ಇದ್ದಂತಹ ಸಂದರ್ಭದಲ್ಲಿ ಕಾವೇರಿ ನೀರನ್ನು ತರದೇ ಇದ್ದಿದ್ದರೆ ಎನಾಗುತ್ತಿತ್ತು ಎಂಬುದನ್ನು ನೋಡಬೇಕು, ಕೋ ಆರ್ಡಿನೇಷನ್ ಇದ್ದರೆ ಜಾಗ್ರತೆ ಹಣ ಕೇಳುವುದಕ್ಕೆ ಅವಕಾಶ ಸಿಕ್ಕುತ್ತದೆ. ಉದಾಹರಣೆಗೆ ಹಿಂದೆ ಕೋರಮಂಗಲ ಲೇಔಟ್ 23 ಲಕ್ಷ ರೂಪಾಯಿ ಎಸ್ಟಿಮೇಟ್ ಆಗಿದ್ದುದು, ಅನಂತರ ಅದು 63 ಲಕ್ಷ ರೂಪಾಯಿ ಎಸ್ಟಿಮೇಟ್ ಆಯಿತು. ಕಾರ್ನರ್ ಸೈಟುಗಳನ್ನು ಮಾರಿದರೂ ಕೂಡ ಎಸ್ಟಿಮೇಟ್ ಹಣ ಸರಿ ಹೊಂದಿಸಲಿಕ್ಕೆ ಆಗಲಿಲ್ಲ ಈಗ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಇರುವುದರಿಂದ ಅದನ್ನು ರೆಕ್ಟಿಫೈ ಮಾಡುವುದಕ್ಕೆ ಅನುಕೂಲ ಇದೆ. ಇವತ್ತು ಮನೆಗಳ ಸಮಸ್ಯೆ ನ್ಯಾಷನಲ್ ಪ್ರಾಬ್ಲಮ್ ಇದೆ. ಒಂದೇ ದಿವಸದಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಆಗುವುದಿಲ್ಲ. ಇವೊತ್ತು ಸಾಧ್ಯವಾದಮಟ್ಟಿಗೂ ಎಲ್ಲರಿಗೂ ಮನೆಗಳನ್ನು ಒದಗಿಸಬೇಕು ಎನ್ನುವುದೇ ಸರ್ಕಾರದ ಮೂಲ ಉದ್ದೇಶ. ಈಗ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಒಂದು ವರ್ಷದಲ್ಲೇ, ಕೆಲವು ಕಾರಣಗಳಿಂದ ಮುಚ್ಚಿಕೊಂಡು ಹೋಗಿದ್ದಂತಹ ಸುಮಾರು ಎರಡೂವರೆ ಕೋಟಿ ರೂಪಾಯಿಯಷ್ಟು ಬಾಳುವ ಆಸ್ತಿ ಸಿಕ್ಕಿದೆ. ಅದನ್ನು ಈಗಾಗಲೇ ಕೆಲವರಿಗೆ ಸೈಟಿನ ಮೂಲಕ ಹಂಚಿದ್ದಾರೆ ಇವೊತ್ತು ಬೆಂಗಳೂರಿನಲ್ಲಿ ಮನೆಗಳ ಪ್ರಾಬ್ಲಮ್ಸ್ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಈಗ ಅರ್ಬನ್ ಸೀಲಿಂಗ್ ಬಂದಿದ್ದರಿಂದ ಸ್ವಲ್ಪ ಜಮೀನು ಬೋರ್ಡ್‌ಗೆ ಫ್ರೀ ಆಫ್ ಕಾಸ್ಟ್‌ನಿಂದ ಸಿಕ್ಕಿರುತ್ತೆ. ಮೊದಲು ಒಂದು ಜಮೀನು ಆಕ್ವೆಯಿರ್ ಮಾಡಿಕೊಳ್ಳಬೇಕು ಎಂದರೆ ಕೋರ್ಟಿಗೆ ಹೋಗುವುದು, ಸ್ಟೇ ತರುವುದು, ಈ ರೀತಿ ತೊಂದರೆಯಾಗಿ, 5-6 ವರ್ಷಗಳ ಕಾಲ ಕಳೆಯುತ್ತಿತ್ತು. ಈಗ ಅಂತಹ ತೊಂದರೆ ಇಲ್ಲ. ಮಾನ್ಯ ಸದಸ್ಯರು ಹೌಸಿಂಗ್, ಪ್ರಾಬ್ಲಮ್ ಸಾರ್ವ್ಯ ಮಾಡಲಿಲ್ಲ ಎಂದು ಹೇಳುತ್ತಿದ್ದರು. ಅದಕ್ಕಾಗಿ ಇಷ್ಟು ವಿಷಯ ತಿಳಿಸಬೇಕಾಯಿತು. ಈಗ ಮಾನ್ಯ ಮುಖ್ಯ ಮಂತ್ರಿಗಳು ತಂದಿರತಕ್ಕದ್ದು. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಬಿಲ್ ಏನು ಇದೆ, ಇದು ಸರಿಯಾಗಿದೆ ಸಮಯೋಚಿತವಾಗಿಯೂ ಇದೆ ಎಂದು ಹೇಳಿ ಇದಕ್ಕೆ ನನ್ನ ಬೆಂಬಲವನ್ನು ಕೊಟ್ಟು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯಸಭಾಧ್ಯಕ್ಷಣಿಯವರೇ, ಈ ದಿವಸ ನಮ್ಮ ಮುಂದೆ ಮಾನ್ಯಮುಖ್ಯ ಮಂತ್ರಿಗಳು ಮಂಡಿಸಿರತಕ್ಕಂತಹ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ತಿದ್ದುಪಡಿ ಮಸೂದೆ ಬಗ್ಗೆ ಎರಡು ವಿಚಾರಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆ ಬೇಡುತ್ತೇನೆ. ಮೊದಲನೆಯದಾಗಿ ಹೇಳಬೇಕು ಎಂದರೆ ಇಂತಹ ಬೋರ್ಡುಗಳು ಸಾಕಾದಷ್ಟು ಅತಿ ದೊಡ್ಡದಾಗುತ್ತಿದ್ದರೆ ಕೆಲಸ ಚೆನ್ನಾಗಿ ಆಗುವುದಿಲ್ಲ. ಈ ಬೋರ್ಡುಗಳನ್ನು ಹೆಚ್ಚಿಗೆ ವಿಸ್ತರಣೆ ಮಾಡುವುದರ ಬಗ್ಗೆ ನನ್ನ ಅಭ್ಯಂತರ ಇದೆ ಅದಕ್ಕೆ ಕಾರಣ ಇಷ್ಟೇ. ಕಾಂಪ್ಯಾಕ್ಟ್ ಆಗಿದ್ದರೆ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾನಾ ಕಾರಣಗಳಿಂದ ಈ ಬೋರ್ಡುಗಳನ್ನು ವಿಸ್ತರಣೆ ಮಾಡಿಕೊಂಡು ಹೋದರೆ ಖಂಡಿತ ಕೆಲಸ ಸಮರ್ಪಕವಾಗಿ ಆಗುವುದಿಲ್ಲ ಎಂದು ಹೇಳುತ್ತೇನೆ. ಈಗ ಹೆಂಗಸರಿಗೆ, ಮತ್ತು ಪೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸ್ಥಾನಗಳನ್ನು ಕೊಡಬೇಕು ಎನ್ನುವ ಬಗ್ಗೆ ನಾನು ವಿರೋಧ ಮಾಡುತ್ತಿಲ್ಲ. ಯಾವುದರಲ್ಲಾದರೂ ಹೆಚ್ಚಿಗೆ ಇದ್ದರೆ ಅದರಲ್ಲಿ ಅಡ್ಜಸ್ಟ್ ಮಾಡಬಹುದು. ಮಾನ್ಯ ಕೃಷ್ಣಪ್ಪನವರು ಟ್ರೇಡ್ ಯೂನಿಯನ್‌ಗೆ ಕೊಡಬೇಕು ಎಂದು ಹೇಳುತ್ತಾರೆ ಅದನ್ನು ತಗೆಯುವ ಹಾಗೆ ಇಲ್ಲ. ಇವೊತ್ತು ಇಂತಹ ಬೋರ್ಡುಗಳಿಗೆ ಊರಿನ ಹಿತದೃಷ್ಟಿಯ ಬಗ್ಗೆ ಕೆಲಸ ಮಾಡುವಂತವನ್ನು. ನಗರ ಅಭಿವೃದ್ಧಿ, ನಗರ ಸೌಂದರ್ಯವನ್ನು ಕಾಪಾಡಿಕೊಂಡು ಬರುವುದಕ್ಕೆ ಅತಕ್ಕ ಹೊಂದಿರತಕ್ಕವರನ್ನು ಹಾಕಬೇಕು ಎಂದು ಹೇಳುತ್ತೇನೆ. ನಾನು ಕಳೆದ ಸಾರಿ ಈ ಸಿ.ಐ.ಟಿ.ಬಿ. ಬಗ್ಗೆ ಹೇಳಿದ್ದೇನೆ. ಇಲ್ಲ ಕೆಲವರು ಯೋಗ್ಯರು ಇದ್ದಾರೆ, ಅನೇಕರ ನಡತೆ ಸರಿಯಿಲ್ಲವೆ ಅಲ್ಲಾ ಸಿಟಿ ಇಂಪ್ರೂವ್‌ಮೆಂಟ್ಸ್ ಬೋರ್ಡ್‌ನಲ್ಲಿ ಟ್ರಸ್ಟೂ ಇಲ್ಲ. ಇವೊತ್ತು ಸಿಟಿ ಇಂಪ್ರೂವ್‌ಮೆಂಟ್ ಆಗಬೇಕಾದರೆ ನಗರ ಅಭಿವೃದ್ಧಿ ಬಗ್ಗೆ ಪೆಟ್ರಿಸನ ಶ್ರದ್ಧೆಯಿಂದ ಕೆಲಸ ಮಾಡತಕ್ಕಂತ ಶುದ್ಧ ಹಸ್ತ ಸದಸ್ಯರು ಇರಬೇಕು ಆದಷ್ಟು ಮಟ್ಟಿಗೆ ಸದಸ್ಯರ ಸಂಖ್ಯೆಯನ್ನು ಕಡಿಮೆ ಮಾಡಬೇಕು. ದಿನೇ ದಿನೇ ಸದಸ್ಯರ ಸಂಖ್ಯೆಯನ್ನು ಹೆಚ್ಚು ಬೆಳೆಸಿಕೊಂಡು ಹೋಗುವುದು ಉತ್ತಮವಲ್ಲ ಎಂದು ಹೇಳುತ್ತೇನೆ. ನಾನು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ, ಮಹಿಳೆಯರಿಗೂ ಸ್ಥಾನಗಳನ್ನು ಕೊಡುವುದರ ಬಗ್ಗೆ ನನ್ನ ವಿರೋಧ ಇಲ್ಲ. ಈ ಬೋರ್ಡುಗಳನ್ನು ಬೆಳೆಸತಕ್ಕದ್ದು ಕಡಿಮೆ ಮಾಡಬೇಕೆಂದು

ನಾನು ಮೊದಲನೆಯದಾಗಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಬಿ.ಡಿ.ಎ. ಪ್ರತ್ಯೇಕವಾದಾಗ ಅನೇಕ ಆಶೋತ್ತರಗಳು ಇದ್ದವು, ಆಲ್ಲಿ ಕೆಲವು ತೊಡಕುಗಳು ಇದ್ದು. ಅಲ್ಲದೆ ಬೆಂಗಳೂರಿನ ನಾನಾ ಸಂಸ್ಥೆಗಳು ಇದ್ದು ಕೆಲಸಗಳು ಸಮರ್ಪಕವಾಗಿ ಆಗಲಿಲ್ಲ. ಎಲ್ಲಾ ವಿಚಾರಗಳಲ್ಲೂ ಕೂಡ ನಗರ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಈವೊತ್ತು ಸುಮಾರು ಒಂದೂವರೆ ವರ್ಷವಾದರೂ ಕೂಡ ಆ ಮಂಡಲಿಯು ಎಷ್ಟು ನರಿಯಾಗಿ ಕೆಲಸ ಮಾಡಬೇಕಾಗಿತ್ತೋ ಅಷ್ಟು ಕೆಲಸವನ್ನು ಸರಿಯಾಗಿ ಕೆಲಸ ಮಾಡದೇ ಇರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ.

ಇದಕ್ಕೆ ಬೋರ್ಡ್ ಛೇರ್ಮನ್‌ರವರದ್ದು ತಪ್ಪು ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಾರಣ ಏನೆಂದರೆ ಅರ್ಬನ್ ಸೀಲಿಂಗ್ ಆಕ್ಟ್ ಬಂದದ್ದು, ಹಾಗೂ ಇನ್ನೂ ಇತರ ನಾನಾ ರೀತಿಯ ತೊಡಕುಗಳು ಬಂದಿದ್ದರಿಂದ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಸರಿಯಾಗಿ ಕೆಲಸಮಾಡುವುದಕ್ಕಾಗಲಿಲ್ಲ. ಈ ಬೆಂಗಳೂರು ನಗರದಲ್ಲಿ ಮನೆಗಳನ್ನು ಹೊಸದಾಗಿ ಕಟ್ಟುವ ಕೆಲಸವನ್ನೂ ಕೂಡ ಹೌಸಿಂಗ್ ಬೋರ್ಡ್‌ನಿಂದ ತೆಗೆದು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ವಹಿಸಲಾಯಿತು. ಈ ಕೆಲಸನ್ನು ಅವರಿಗೆ ವಹಿಸಿದರೂ ಕೂಡ ಈಗ ಸುಮಾರು ಒಂದೂವರೆ ವರ್ಷದಿಂದ ಯಾವ ವಿಧಾವಾದ ಮನೆಗಳನ್ನೂ ಹೊಸದಾಗಿ ಕಟ್ಟಿಲ್ಲ. ಇದು ಬೆಂಗಳೂರು ಡೆವಲಪ್‌ಮೆಂಟ್ ಬೋರ್ಡ್‌ನವರು ಮಾಡಿರತಕ್ಕಂಥ ಒಂದು ಲೋಪ ಎಂದು ಹೇಳುತ್ತೇನೆ. ಇದೇ ರೀತಿಯ ಇನ್ನೂ ಅನೇಕ ಕಾರಣಗಳಿಂದ ಇದು ಚೆನ್ನಾಗಿ ಕೆಲಸಮಾಡುವುದಕ್ಕಾಗಲಿಲ್ಲ ಹಿಂದೆ ಬೋರ್ಡ್ ಛೇರ್ಮನ್‌ರವರಿಗೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಪರಸ್ಪರ ವಿಶ್ವಾಸ ಇದಾದರಿಂದ ಕೂಡ ಕೆಲಸವಾಗಲಿಲ್ಲ. ಬಿ.ಡಿ.ಎ. ನವರು ಇದುವರೆಗೆ ಸುಮಾರು 10-15 ಸಾವಿರಕ್ಕಿಂತ ಹೆಚ್ಚಿಗೆ ಮನೆ ಸೈಟುಗಳನ್ನು ಹಂಚಿದ್ದಾರೆ. ಆದರೆ ಆ ಸೈಟುಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಕಾರಣ ಏನೆಂದರೆ ಸರ್ಕಾರದಿಂದ ಆಗಲಿ ಅಥವಾ ಬ್ಯಾಂಕ್‌ಗಳಿಂದ ಆಗಲಿ ಸುಲಭವಾಗಿ ಸಾಲ ಸಿಕ್ಕುವುದು ಕಷ್ಟವಾಗಿದೆ ಆದುದರಿಂದ ಈ ಬಿ.ಡಿ.ಎ. ನವರು ಹೊಸದಾಗಿ ಮನೆಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಬಿದ್ದರೆ ಅವರು ಸೈಟುಗಳನ್ನು ಕೊಟ್ಟಿದ್ದಕ್ಕೂ ಸಾರ್ಥಕವಾಗುವುದಿಲ್ಲ, ಮತ್ತು ಜನಗಳು ಸೈಟುಗಳನ್ನು ತೆಗೆದುಕೊಂಡಿರುವವರು ಕೂಡ ತಮ್ಮಲ್ಲಿದ್ದ ಹಣವನ್ನು ವೃಥಾ ಸೈಟಿನ ಮೇಲೆ ಹಾಕಿದಂತಾಗುತ್ತದೆ ಹೌಸಿಂಗ್ ಬೋರ್ಡ್‌ನವರು ಕರ್ನಾಟಕದ ಈ ಬೇರೆ ಬೇರೆ ಭಾಗಗಳಲ್ಲಿ ಹೊಸದಾಗಿ ಮನೆಗಳನ್ನು ಕಟ್ಟುತ್ತಿದ್ದಾರೆ. ಆದರೆ ಈ ಬೆಂಗಳೂರಿನಲ್ಲಿ ಮಾತ್ರ ಹೊಸದಾಗಿ ಕಟ್ಟುತ್ತಿಲ್ಲ. ಇದರಿಂದ ನಗರದಲ್ಲಿ ಮನೆಗಳ ಅಭಾವ ಬಹಳವಾಗಿ ಹೆಚ್ಚುತ್ತಿದೆ. ಇಂಥ ಸಂದರ್ಭದಲ್ಲಿ ಹೌಸಿಂಗ್ ಬೋರ್ಡ್‌ನವರೂ, ಕಾರ್ಪೊರೇಷನ್‌ನವರೂ ಮತ್ತು ಬಿ.ಡಿ.ಎ. ನವರೂ ಒಟ್ಟಿಗೆ ಸಹಕರಿಸಿ ಹೊಸದಾಗಿ ಮನೆಗಳನ್ನು ಕಟ್ಟಲು ವ್ಯವಸ್ಥೆ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಅನೇಕ ಸಾರಿ ಯಾರು ಯಾರಿಗೆ ಸೈಟುಗಳಿಲ್ಲ ಅಂಥವರಿಗೆ ಸೈಟುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ನಾನು ಹೇಳುತ್ತೇನೆ, ಈರೀತಿ ಸರ್ಕಾರದಿಂದ ಬರೀ ಸೈಟುಗಳನ್ನು ಕೊಡುವುದರಿಂದ ಯಾವುದೇ ರೀತಿಯ ಪ್ರಯೋಜನವೂ ಕೂಡ ಆಗುವುದಿಲ್ಲ. ಈ ಯೋಜನೆಯಿಂದ ಜನತೆಗೆ ಪ್ರಯೋಜನವಾಗಬೇಕಾದರೆ ಮನೆಗಳನ್ನು ಕಟ್ಟುವುದಕ್ಕೆ, ಅವಕಾಶ ಮಾಡಿಕೊಡಬೇಕು. ಮನೆಗಳನ್ನು ಕಟ್ಟುವುದಕ್ಕೆ ಕಾನೂನಿನಲ್ಲಿದ್ದ ತೊಡಕುಗಳೆಲ್ಲಾ ಈಗ ತಪ್ಪಿರುವುದರಿಂದ ಸರ್ಕಾರದವರು ಒಂದು ವರ್ಷದಲ್ಲಿ ಇಂತಿಷ್ಟು ಮನೆಗಳನ್ನು ಕಟ್ಟಲೆ ಬೇಕೆಂದು ಒಂದು ಯೋಜನೆಯನ್ನು ಹಾಕಿಕೊಂಡು ನಗರದಲ್ಲಿರುವ ಮನೆಗಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ಹೇಳಬಯಸುತ್ತೇನೆ. ಹಾಗೆಯೇ ಪಿ.ಡಬ್ಲ್ಯೂ.ಡಿ.ನಲ್ಲಿರತಕ್ಕ ನೂಪರಿಂಟೆಂಡಿಂಗ್ ಇಂಜಿನಿಯರ್‌ಗಳಿಗೆ, ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ಯಾವರೀತಿಯ ಅಧಿಕಾರ ಇದೆಯೋ ಅದೇ ರೀತಿಯ ಅಧಿಕಾರವನ್ನು ಇವರಿಗೂ ಕೂಡ ಕೊಡಬೇಕು. ಈ ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ಮುಂದೆ ಅನುಕೂಲವಾಗುತ್ತದೆಂದು ಹೇಳುತ್ತಿದ್ದೇನೆ ಈಗಿರತಕ್ಕ ಇಂಜಿನಿಯರ್‌ಗಳು ಬಹಳ ದಕ್ಷರೂ ಶುದ್ಧ ಹಸ್ತರೂ ಆಗಿದ್ದಾರು ಆದರೆ ಈಗ ಅವರ ಮೇಲೆ ಕೂಡ ಅನೇಕ ಕಡೆಗಳಿಂದ ಆರೋಪಗಳು ಬರುತ್ತಿವೆ. ನಾನು ಹೇಳುವುದೇ ನೆಂದರೆ ಯಾರೇ ಆಗಲಿ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದು, ಅವ್ಯವಹಾರಗಳನ್ನು ನಡೆಸುವುದು ಇಂಥವರ ವಿರುದ್ಧ ಸರಿಯಾದ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ನೀವು

ಎಂಥಾ ಯೋಜನೆಯನ್ನೂ ಹಾಕಿಕೊಂಡರೂ ಕೂಡ ಅದು ಫಲಕಾರಿಯಾಗುವುದಿಲ್ಲ. ನಾನು ಆಗಲೇ ಹೇಳಿದಹಾಗೆ ದುಡ್ಡು ಕೊಡದೇ ಯಾವ ಕೆಲಸವೂ ಕೂಡ ಆಗುವುದಿಲ್ಲ ಎಂಬ ದೂರುಗಳು ಕೇಳಿ ಬರುತ್ತಿವೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕೆಂದರೆ ಬೆಂಗಳೂರು ಡೆವಲಪ್ ಮೆಂಟ್ ಅಥಾರಿಟಿಯವರು ಬರೀ ಊರಿನ ಹೊರಗಡೆಯೇ ಮನೆಗಳನ್ನು ಕಟ್ಟುವದು, ಹೊಸದಾಗಿ ಲೇ ಔಟ್‌ಗಳನ್ನು ಮಾಡುವುದರ ಜೊತೆಗೆ ಇನ್ನೂ ಕೆಲವು ಕೆಲಸಗಳನ್ನು ಮಾಡಬೇಕು. ಏನೆಂದರೆ ನಗರದ ಹಳೆಯ ಪಟ್ಟಣದಲ್ಲಿ ಅಂದರೆ ನಗರದ ಒಳಭಾಗದಲ್ಲಿ ಅನೇಕ ಕಡೆ ಸಣ್ಣ ಸಣ್ಣ ಸಂದಿಗೊಂದಿಗಳಿವೆ, ಒಂದೇ ಮನೆಯ ವರಾಂಡದಲ್ಲಿ ಹತ್ತಾರು ಮನೆಗಳಿವೆ, ಅಲ್ಲಿ ಸರಿಯಾಗಿ ಗಾಳಿ, ಬೆಳಕೂ ಸಹ ಬೀಳುವುದಿಲ್ಲ. ಇದರಿಂದಾಗಿ ಅಲ್ಲಿನ ಜನಗಳಿಗೆ ಆರೋಗ್ಯ ಕೆಡುತ್ತದೆ. ನಾನಾ ರೀತಿಯ ಖಾಯಿಲೆಗಳು ಬರುತ್ತವೆ. ಆದುದರಿಂದ ನಾನು ಹೇಳುವುದೇನೆಂದರೆ ಡೆವಲಪ್‌ಮೆಂಟ್ ಅಥಾರಿಟಿಯವರು ಇದನ್ನೆಲ್ಲಾ ನಿರ್ಮೂಲನ ಮಾಡಲು ಕ್ರಮ ಕೈಗೊಳ್ಳಬೇಕು. ಇದೇ ರೀತಿಯಲ್ಲಿ ಭಾರತ್ ಟಾಕೀಸ್ ಹತ್ತಿರ ಶಿವರಾಂಪುರ ಮತ್ತು ದೊಡ್ಡ ಬ್ಯೆಲಹಾನ ಎಂದು ಇವೆ ಅಲ್ಲೂ ಕೂಡ ಕೊಳಚೆ ಪ್ರದೇಶ ಇದೆ ಅಲ್ಲಿ ಮನೆಗಳನ್ನು ಸಿಕ್ಕಾಪಟ್ಟೆ ಕಟ್ಟಿದಾರೆ. ಈ ಜಾಗಗಳನ್ನು ಬೆಂಗಳೂರು ನಗರನಭೆಯವರು ಬಿ.ಡಿ.ಎ. ನವರೂ ಸೇರಿಕೊಂಡು ಇಂಪ್ರೂವ್ ಮಾಡುವುದಕ್ಕೆ ಮನಸ್ಸು ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಈ ಬೋರ್ಡ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡುವಾಗ ಇದನ್ನು ರಾಜಕೀಯ ದೃಷ್ಟಿಯಿಂದ ನೋಡದೆ, ನಗರದ ಅಭಿವೃದ್ಧಿ ದೃಷ್ಟಿಯಿಂದ ಒಳ್ಳೆಯ ಅಧಿಕಾರಿಗಳನ್ನು ಹಾಕಬೇಕು; ಸ್ವಾಮಿ, ನಮ್ಮ ಬಿ.ಡಿ.ಎ ಛೇರ್ಮನ್‌ರ ಬಗ್ಗೆ ಕೆಲವು ಆರೋಪಗಳನ್ನು ಮಾಡಿದ್ದಾರೆ. ಆದರೆ ನಾನು ಹೇಳುತ್ತೇನೆ, ಅವರು ಒಳ್ಳೆಯವರು, ದಕ್ಷತೆಯಿಂದ ಕೆಲಸ ಮಾಡುತ್ತಾರೆ. ಅವರಿಗೆ ಇನ್ನೂ ಹೆಚ್ಚು ಉತ್ತೇಜನವನ್ನು ಕೊಟ್ಟರೆ ಅಲ್ಲಿ ಇನ್ನೂ ಬಹಳ ಚೆನ್ನಾಗಿ ಕೆಲಸ ನಡೆಯುತ್ತದೆ. ತಾವು ಈ ಬೋರ್ಡ್‌ನ್ನು ಒಳ್ಳೆಯರೀತಿಯಲ್ಲಿ ಕಾನ್‌ಸ್ಟಿಟ್ಯೂಟ್ ಮಾಡಿದರೆ ಅಲ್ಲಿ ಕೆಲಸವೂ ಕೂಡ ಚೆನ್ನಾಗಿರುತ್ತದೆ. ಇವರ ಜೊತೆಗೆ ನಗರಸಭೆಯ ಅಡ್ಮಿನಿಸ್ಟ್ರೇಟರೂ ಕೂಡ ಬಹಳ ದಕ್ಷರಾದವರೇ ಆದ್ದಾರೆ.

ಸ್ವಾಮಿ, ಇದೇ ಸಂದರ್ಭದಲ್ಲಿ ಇನ್ನೊಂದು ಮಾತು ಹೇಳಬೇಕಾದರೆ, ನಮ್ಮ ಬೆಂಗಳೂರು ನಗರವು ದಿನೇ ದಿನೇ ಬೆಳೆಯುತ್ತಿದೆ ಇದರ ಬೆಳವಣಿಗೆಗೆ ತಕ್ಕಂತೆ ನೀರು ಸರಬರಾಜು ಮಾಡಲು ಕಾವೇರಿ ನೀರಿನ ಫಸ್ಟ್ ಸ್ಟೇಜನ್ನು ಕಾರ್ಯಗತ ಮಾಡಿದಿರಿ. ಆದರೆ ಜನಸಂಖ್ಯೆ ಬೆಳೆಯುತ್ತಿರುವುದರಿಂದ ಮತ್ತೆ ನೀರಿನ ಸರಬರಾಜು ಸಾಲುವುದಿಲ್ಲ ಹೋಗಬಹುದು, ಆದುದರಿಂದ ಈ ವಿಷಯವನ್ನು ಈಗಲೇ ಮುಂದಾಲೋಚನೆ ಮಾಡಿ ಕಾವೇರಿ ಸೆಕೆಂಡ್ ಸ್ಟೇಜನ್ನೂ ಕೂಡ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀ ಮಾನ್ ಕೃಷ್ಣನ್‌ರವರು ಹೇಳಿದಂತೆ ಸಾಮಾನ್ಯವಾಗಿ ಬಹಳ ಜನಾನನ್ನು ಸೆಳೆಯುಗಳಾಗಿ ಮಾಡುವುದಕ್ಕೆ ಬದಲು ನಗರ ಹತ್ತಿಪ್ಪತ್ತಿಯನ್ನು ಗಮನದಲ್ಲಿಟ್ಟುಕೊಂಡು ಮುಕ್ಕಳಿಗೆ ಆಟವಾಡಲು ಕ್ರೀಡಾಂಗಣ, ಉದ್ಯಾನವನಗಳು, ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಗಮನ ಹರಿಸಬೇಕು. ಇದು ಎಲ್ಲ ವಿಧದಿಂದಲೂ ಕೂಡ ಬಹಳ ಮುಖ್ಯವಾದದು ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇರೀತಿಯಲ್ಲಿ ನಗರದ ಗ್ರೀನ್ ಬೆಲ್ಟ್ ಬಗ್ಗೆ ಕೂಡ ಗಮನಹರಿಸಬೇಕು. ಇದರ ಬಗ್ಗೆ ಅನೇಕ ದಿವಸಗಳಾದ ಮೇಲೆ ಮಾಡುತ್ತಿದ್ದೇವೆ.

ಸ್ವಾಮಿ, ಇನ್ನು ಸ್ಲಂಕ್ಲಿಯರೆನ್ಸ್ ಬಗ್ಗೆ ಒಂದುಮಾತು ಹೇಳಬೇಕೆಂದರೆ ಸ್ಲಂಕ್ಲಿಯರೆನ್ಸ್ ಬೋರ್ಡ್‌ಗೂ ಮತ್ತು ಬಿ.ಡಿ.ಎ. ನವರಿಗೂ ಸರಿಯಾದ ಒಂದು ಕೋ ಆರ್ಡಿನೇಷನ್ ಇಲ್ಲವಾಗಿದೆ. ಇದರ ಕಡೆಯೂ ಕೂಡ ತಾವು ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಿಜವಾಗಿಯೂ ಹೇಳುವುದಾದರೆ ಅನೇಕ ಸ್ಲಮ್‌ಗಳಲ್ಲ ಏನಾಗಿದೆ ಎಂದರೆ ೧೦೦ ಜನಕ್ಕೆ ಬಾಗವಿದ್ದರೆ ಸುಮಾರು ಇನ್ನೂರು ಮುನ್ನೂರು ಜನರು ಗುಡಿಸಲುಗಳಲ್ಲಿ ವಾಸವಾಗಿರುತ್ತಾರೆ. ಅಲ್ಲಿರುವವರಿಗೆಲ್ಲ ಮಲ್ಟಿಪ್ಯೂರೀಪ್ ಟಾಯ್ಲೆಟ್‌ಗಳನ್ನು ಕಟ್ಟಿಸಿಕೊಡಿ. ಇಲ್ಲದಿದ್ದರೆ ಅವರಿಗೆ ತೊಂದರೆಯಾಗದಂತೆ ಒಂದು ಸಮಗ್ರವಾದ ಒಂದು ಕೋ ಆರ್ಡಿನೇಷನ್ ರೀತಿನೀತಿಗಳನ್ನು ತೆಗೆದುಕೊಂಡರೆ ಸ್ಲಮ್ ಕ್ಲಿಯರೆನ್ಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಬೆಂಗಳೂರು ನಗರದಲ್ಲಿ ಕೇವಲ ೫ ಕಡೆ

ಇರತಕ್ಕಂಥ ಸ್ಲಮ್‌ನ್ನು ಕ್ಲಿಯರ್ ಮಾಡಲು ಸುಮಾರು ಐದುವರೆ ಕೋಟಿ ರೂಪಾಯಿಗಳನ್ನು ಖರ್ಚುಮಾಡಿರುತ್ತಾರೆ. ಉದಾಹರಣೆಗೆ ಕಲಾಸಿಪಾಳ್ಯಂನಲ್ಲಿ ಇದ್ದಂಥ ಸ್ಲಮ್‌ನ್ನು ಜಯನಗರದಲ್ಲಿ ಉತ್ತಮವಾದ ಲೇಔಟ್‌ನಲ್ಲಿ ಹಾಕಿದ್ದಾರೆ. ನಾನು ಹೇಳುವುದೇನೆಂದರೆ ಹೆಚ್ಚು ಖರ್ಚು ಇಲ್ಲದೆ ಮನೆಗಳನ್ನು ಕಟ್ಟಿ ಅನುಕೂಲವಾಗುವಂತೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಈಗಾಗಲೇ ಅನೇಕರು ಹೇಳಿದ್ದೇನೆ. ತಾವು ಸ್ಲಮ್‌ಗಳಲ್ಲಿ ಹೋಗಿ ನೋಡಬೇಕು, ಅಲ್ಲಿ ಕಟ್ಟಿರತಕ್ಕಂಥ ರ್ಯಾಪಿಟರಿ ಯಾವರೀತಿಇದೆ ಎಂಬುದನ್ನು, ಅದಕ್ಕಾಗಿ ಎಷ್ಟೊಂದು ಖರ್ಚುಮಾಡಿದ್ದೀರೋ ಅಷ್ಟು ವ್ಯರ್ಥವಾಗಿ ಆದ್ದರಿಂದ ನನ್ನ ಸಲಹೆ ಏನೆಂದರೆ ಹೊಸದಾಗಿ ಇಬ್ಬರು ಮೆಂಬರ್ಸ್‌ನ್ನು ಸೇರಿಸಿಕೊಳ್ಳುತಕ್ಕಂಥಾದ್ದು ಮತ್ತು ಇಂಜಿನೀಯರಿಂಗ್ ಇಲಾಖೆಯ ಒಬ್ಬ ಅಧಿಕಾರಿಯನ್ನು ಮತ್ತು ಹೌಸಿಂಗ್ ಬೋರ್ಡಿಗೆ ಸಂಬಂಧಪಟ್ಟ ಹಾಗೆ ಒಬ್ಬ ಅಧಿಕಾರಿಯನ್ನು ತೆಗೆದುಕೊಳ್ಳಬೇಕು ಹೌಸಿಂಗ್ ಬೋರ್ಡ್ ಹೌಸಿಂಗ್ ಕಾರ್ಪೊರೇಷನ್ ಮತ್ತು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಇವರು ಮೂರುಜನರು ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡುಕೆಲಸಮಾಡಲು ಬೋರ್ಡಿನ ಸದಸ್ಯರ ಸಂಖ್ಯೆಯನ್ನು ವಿಸ್ತರಣೆ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

† ಶ್ರೀ ಡಿ. ದೇವರಾಜಅರಸ್.—ಮಾನ್ಯ ಅಧ್ಯಕ್ಷರೇ ಈ ತಿದ್ದುಪಡಿ ಮಸೂದೆಯು ಮೇಲೆ ಈಗ ಮಾತನಾಡಿದಂಥ ಅನೇಕ ಮಾನ್ಯ ಸದಸ್ಯರು ಈ ಮಸೂದೆಯನ್ನು ಸ್ವಾಗತಿಸುತ್ತಾ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಮುಖ್ಯವಾಗಿ ಹೇಳಿದಂಥಾದ್ದು ಎಂದರೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡಬೇಕು, ಅದರಲ್ಲಿ ಲೇಬರ್ ರೆಪ್ರಸೆಂಟೇಟಿವ್ ಒಬ್ಬರು ಇರಬೇಕೆಂದು ಕೇಳುತ್ತಿದ್ದಾರೆ. ತಾತ್ವಿಕವಾಗಿ ಅದಕ್ಕೆ ನನ್ನದೇನು ಅಭ್ಯಂತರವಿಲ್ಲ. ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಶ್ರೀಮಾನ್ ಶಾಮಣ್ಣನವರು ಹೇಳಿದ್ದರಲ್ಲಿ ಅರ್ಥವಿದೆ. ಸದಸ್ಯರ ಸಂಖ್ಯೆಯನ್ನು ಜಾಸ್ತಿ ಮಾಡಿದರೆ ನಂಪ್ಲೆಗಳು ಜಾಸ್ತಿಗಾಗಿ ಕೆಲಸಮಾಡುವುದಕ್ಕೆ ಸ್ವಲ್ಪ ಅಡಚಣೆಯಾಗಬಹುದು. ಕಾಂಪ್ಲಾಕ್ಟ್ ಬಾಡಿ ಇರುವುದು ಒಳ್ಳೆಯದೆಂದು ಹೇಳುವುದು ಅನುಭವದ ಮಾತೇ ಆಗಿರುತ್ತದೆ. ಬೆಂಗಳೂರು ನಗರದ ಪರವಾಗಿ ಮಾತನಾಡಿರತಕ್ಕಂಥ ಸದಸ್ಯರಾದ ಶ್ರೀಮಾನ್ ನಾಯುದ್ದುರವರು, ಮತ್ತೊಬ್ಬರು ಇನ್ನಿತರರು ಒಬ್ಬರು ರೆಪ್ರಸೆಂಟೇಟಿವ್ ಇರಬೇಕೆಂದು ಹೇಳುವುದೂ ಕೂಡ ನ್ಯಾಯವಾಗಿ ಕಾಣುತ್ತದೆ. ಈ ಎರಡೂ ಜನ ಸದಸ್ಯರು ಇರುವುದರಿಂದ ಒಳ್ಳೆಯದೇ. ಅವರಿಂದ ಏನೂ ತೊಂದರೆ ಇಲ್ಲ. ಶ್ರೀಮಾನ್ ಶಾಮಣ್ಣನವರು ಹೇಳಿದಹಾಗೆ ನ್ಯಾಮ್ಯುಟ್ ಮಾಡುವಾಗ ಅಂಥವರನ್ನು ಹಾಕಬೇಕು, ಇಂಥವರನ್ನು ಹಾಕಬೇಕು ಎನ್ನುವುದು ಮುಖ್ಯವಲ್ಲ ಅರ್ಹರಾಗಿ, ಯೋಗ್ಯರಾಗಿ ಚೆನ್ನಾಗಿ ಕೆಲಸ ಮಾಡತಕ್ಕಂಥವರನ್ನು ಹಾಕಬೇಕೆಂದು ಏನು ಹೇಳಿದ್ದಾರೆ, ಅದನ್ನು ನಾನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತೇನೆ. ಈ ರೀತಿಯಾಗಿ ಈಗಾಗಲೇ ಮಾಡಿದ್ದೇವೆ ಮುಂದೆಯೂ ಕೂಡ ಅದೇ ರೀತಿ ಮಾಡುತ್ತೇವೆ. ಅದರಲ್ಲೇನು ಅನುಮಾನಪಡಬೇಕಾಗಿಲ್ಲವೆಂದು ಭರವಸೆ ಕೊಡುತ್ತೇನೆ.

ಇನ್ನು ಆರ್ಡಿನೆನ್ಸ್ ವಿಚಾರವಾಗಿ ಹೇಳಿದರು ಇದನ್ನು ನಾನು ಮೊದಲೇ ತರಬೇಕೆಂದು ಇದ್ದೆ ಕಾರಣಾಂತರದಿಂದ ಸ್ವಲ್ಪ ವಿಳಂಬ ಆಯಿತು. ನವಂಬರ್ ಅಧಿವೇಶನದಲ್ಲಿಯೇ ಈ ಬಿಲ್ಲನ್ನೂ ತರಬೇಕೆಂದು ಹೇಳುತ್ತಿದ್ದೆವು. There is no motive behind so far as bringing this ordinance previous to the comme cement of this session. ಸೆಕ್ಷನ್ 62ರ ಪ್ರಕಾರ ಹೌಸಿಂಗ್ ಬೋರ್ಡ್‌ನವರು ಕೆಲಸ ಮಾಡುವಂತಿಲ್ಲವೆಂದು ಹೇಳಿ ಹೌಸಿಂಗ್ ಬೋರ್ಡ್‌ನವರು ಮನೆಗಳನ್ನು ಕಟ್ಟುವುದನ್ನು ಅರ್ಧಂಬರ್ಧಕ್ಕೆ ನಿಲ್ಲಿಸಬೇಕಾಯಿತು. ಈ ಒಂದು ದೃಷ್ಟಿಯಿಂದ ಪ್ರೊಸೀಡ್ ಆಗಲು ಕಾರಣಾಂತರದಿಂದ ವಿಳಂಬವಾಯಿತು. ತಾತ್ವಿಕವಾಗಿ ಹೇಳುವುದಾದರೆ ಇದರಲ್ಲಿ ಏನೇನು ಅಗತ್ಯವಿದೆ ಅದರ ಬಗ್ಗೆ ನಾವು ನಿಗಾವಹಿಸಿ ಕೆಲಸಗಳನ್ನು ಪೂರೈಸಬೇಕೆಂದು ಇದ್ದರೂ, ಮಧ್ಯೆ ಮಧ್ಯೆ ಉಂಟಾದ ಅಡಚಣೆಗಳಿಂದ ಅದು ನಿಂತುಹೋಯಿತು. ಆ ವೇಳೆಯಲ್ಲಿ ಅದಕ್ಕಿಂತ ಮುಂಚೆ ಕ್ಯಾಬಿನೇಟ್‌ಗೂ ಬರದೆ ಜ್ಯಾಮ್‌ಪಾಸ್ ಆಗಿಹೋಯಿತು.

SRI M. S. KRISHNAN.—The day of the notification of the session and also the day of the ordinance are coincident.

ಶ್ರೀ ಡಿ. ದೇವರಾಜಅರಸ್ ನಿಜ ಕೋಇನ್‌ಸೈಡ್ ಆಯಿತು. ತಾವು ಹೇಳುವುದು ಸರಿಯೇ ಆದು ಹೀಗಾಗುತ್ತದೆಂದು ಗೊತ್ತಿರಲಿಲ್ಲ. Some lapses have taken place. There is no loss or gain by bringing this ordinance, As a matter of principal there was no need. This need not have come in the form of an ordinance. Any way it has happened ಆಮೇಲೆ ಇನ್ನೊಂದು ವಿಚಾರ. ಇತ್ತೀಚೆಗೆ ಬೆಂಗಳೂರು ಡೆವಲಪ್‌ಮೆಂಟ್ ಅಥಾರಟಿ ಬಂದಿರುತ್ತದೆ. ಇದು, ಕಾರ್ಪೊರೇಷನ್, ವಾಟರ್ ಸೀವರೇಜ್ ಬೋರ್ಡ್, ಈ ಮೂರು ಸಂಸ್ಥೆಗಳಲ್ಲಿ ಎಷ್ಟರಮಟ್ಟಿಗೆ ಕೋಆರ್ಡಿನೇಷನ್ ತರಬೇಕು ಎನ್ನುವುದರ ಬಗ್ಗೆ ಎಚ್ಚರಿಕೆಯಿಂದ ನೋಡುತ್ತಿದ್ದೇವೆ. ಅದರಲ್ಲಿ ಏನು ಡಿಫರೆನ್ಸ್ ಕಾಣುತ್ತಾ ಇಲ್ಲ. ಕಾರ್ಪೊರೇಷನ್ನಿನಲ್ಲಿ ತಮಗೆ ಗೊತ್ತಿರುವಹಾಗೆ ಅಡ್ಮಿನಿಸ್ಟ್ರೇಟರ್ ಏನು ಇದ್ದಾರೆ ಅವರು ತುಂಬಾ ಹೊಂದಿಕೊಂಡು ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ. ವಾಟರ್ ಸೀವರೇಜ್ ಬೋರ್ಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಒಂದು ಪ್ರತ್ಯೇಕ ಇನ್‌ಸ್ಟಿಟ್ಯೂಷನ್. That is a separate institution under a separate statute exclusively ment for the purposes of building water resources, looking after its constructions and making arrangement of sewerage. ನೀರು ನರಬರಾಜು ಮಾಡುವ ವಿಷಯದಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿರುಬಹುದು. ಇಲ್ಲ ವೆಂದು ಹೇಳುವುದಕ್ಕಾಗುವುದಿಲ್ಲ.

ನೀರು ನರಬರಾಜು ಮಾಡುವ ವಿಚಾರದಲ್ಲಿ ವ್ಯಾಪಕವಾದ ಕೆಲಸಕಾರ್ಯಗಳನ್ನು ನಡೆಸ ಬೇಕೆಂದು ಯಾವುದೋ ಒಂದು ಚೈಮ್‌ನಲ್ಲಿ ಒಟ್ಟು 30-50 ಹಳ್ಳಿಗಳನ್ನು ಸೇರಿಸಿಬಿಟ್ಟಿದ್ದಾರೆ. ಆ ಹಳ್ಳಿಗಳನ್ನು ಇದರಲ್ಲಿ ಸೇರಿಸಿಬಿಟ್ಟಿರುವುದರಿಂದ ಈಗ ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ಕಾರ್ಪೊರೇಷನ್ ಅಕ್ಟಿವಿಟೀಸ್‌ನಿಂದ ಅಷ್ಟು ದೂರ ಎಟುಕಿನುವುದಕ್ಕೆ ಕಾರ್ಪೊರೇಷನ್‌ನವರಿಗೆ ಸಾಧ್ಯವಾಗಲಲ್ಲ. ಇದು ಕಾರ್ಪೊರೇಷನ್‌ನಲ್ಲಿ ಅಡ್ಮಿನಿಸ್ಟ್ರೇಟರ್ ಬಂದಾಗಿನಿಂದ ಹೀಗೆ ಆಗಿದೆ ಎಂದು ಅಲ್ಲ, ಅಲ್ಲಿ ಎಲೆಕ್ಟೆಡ್‌ಬಾಡಿ ಇದ್ದಾಗಲೂ ಕೂಡ ಹೀಗೆಯೇ ಆಗಿದೆ. ಮೊದಲನಿಂದಲೂ ಈ ವಿಚಾರದಲ್ಲಿ ಒಬ್ಬರಿಗೊಬ್ಬರು ತೊಂದರೆ ಕೊಡುತ್ತಾ ಇರುವುದು ಇದ್ದೇಇತ್ತು. ಇತ್ತೀಚೆಗೆ ಅಡ್ಮಿನಿಸ್ಟ್ರೇಟರ್ ಬಂದಮೇಲೆ ಈ ಕೆಲಸ ಕಾರ್ಯಗಳೆಲ್ಲಾ ಯಾವ ಒಂದು ಅಡೆತಡೆಯೂ ಇಲ್ಲದೇ ಎಲ್ಲೆಲ್ಲಿ ಈ ಕೆಲಸಗಳು ನಡೆಯಬೇಕಾಗಿದೆ ಅಲ್ಲೆಲ್ಲಾ ಕೆಲಸ ನಡೆಯುತ್ತಿದೆ ಸಂಧರ್ಭಾನು ಸಾರವಾಗಿ ವಾಟರ್ ಬೋರ್ಡ್‌ನವರು ಮಾಡಬೇಕಾದ ಕೆಲಸವನ್ನು ಕಾರ್ಪೊರೇಷನ್‌ನವರೂ ಮಾಡಿದ್ದಾರೆ. ಏಕೆಂದರೆ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲವೆಂದು ಹೇಳಿದಾಗ ಏನು ಮಾಡುವುದು? ಆ ಸಮಯದಲ್ಲಿ ವಾಟರ್‌ಬೋರ್ಡ್‌ನವರೇ ಮಾಡಬೇಕು ಎಂದು ನಾವು ಹೇಳುವ ಹಾಗಿಲ್ಲ. ಒಂದೊಂದು ಸಮಯದಲ್ಲಿ ಬಿ ಡಿ.ಎ. ಅವರಿಗೂ ಹೇಳಿದ್ದೇವೆ, ಅವರು ಇದನ್ನು ಮಾಡಿಸಿ ದುದ್ದು ಖರ್ಚಾಯಿತು ಎಂದು ತಿಳಿದುಕೊಂಡರೂ, ಮುಖ್ಯವಾಗಿ ಜನರ ಕಷ್ಟವನ್ನು ಸುಧಾರಿಸಬೇಕು ಎಂಬುದಾಗಿ ಅವರಿಗೆ ಹೇಳಿದ್ದೇವೆ. There are certain points where the B DA had to do things outside their purview They have gone to the field and provided facilities to the people. ಇದರಲ್ಲಿ ಕಾರ್ಪೊರೇಷನ್ ಅವರಿಗೂ ಮತ್ತು ಬಿ ಡಿ.ಎ ಅವರಿಗೂ ಒಂದು ಹೊಂದಾಣಿಕೆ ಇಲ್ಲದೇ ಹೋಗಿದ್ದರೆ ಇವೆಲ್ಲಾ ಕೆಲಸ ಕಾರ್ಯಗಳನ್ನು ಮಾಡಿಸುವುದಕ್ಕೆ ಆಗುತ್ತಾ ಇರಲಿಲ್ಲ. ಇತ್ತೀಚೆಗೆ ಎಲ್ಲರಿಗೂ ಒಂದು ಕೋ-ಆರ್ಡಿನೇಷನ್ ಬಂಯತಾ ಇದೆ. ಇದು ಬಹಳ ಮಟ್ಟಿಗೆ ಬಂದಿದೆ ಬೆಂಗಳೂರಿನ ಸಮಸ್ಯೆಯ ಬಗ್ಗೆ ಹೇಳಬೇಕೆಂದರೆ ಈ ನಗರದ ಸಮಸ್ಯೆ ಒಂದಲ್ಲ, ಎರಡಲ್ಲ, ಸಾವಿರಾರು ಸಮಸ್ಯೆಗಳು. ಈ ಕೊಳಚೆ ಪ್ರದೇಶಗಳು ಇವತ್ತಿನಿಂದ ಹುಟ್ಟಿಕೊಂಡಿಲ್ಲ.

5-00 P.M.

It has its historic background. ಇದು ಹೊಸಹೊಸದಾಗಿ ಬೆಳೆಯುತ್ತಾ ಇದೆ. ಈಗ ಇರುವುದೂ ಸಹ ಬೆಳೆಯುತ್ತಾ ಇದೆ. ಇದನ್ನು ಬೆಳೆಸುವವರು ಯಾರು ಎನ್ನುವುದೂ ಗೊತ್ತಿಲ್ಲ ಇವತ್ತಿಗೆ ಈ ಸಮಸ್ಯೆ ಪರಿಹಾರ ಆಯಿತು ಎಂದು ಹೇಳುವ ಹಾಗಿಲ್ಲ ಎಲ್ಲಾದರೂ ಜಾಗ ಖಾಲಿ ಇದೆ ಎಂದು ಕಂಡು ಬಂದರೆ ಅಲ್ಲಿ ಒಂದು ಬಾವುಟ ಏರಿಸಿ ಗುಡಿಸಲುಗಳನ್ನು ಹಾಕಿ

ಕೊಂಡು ಕೂತುಬಿಡುತ್ತಾರೆ. ನಿಮ್ಮ ಒಂದು ಏರಿಯಾಕ್ಕೆ ಹೋಗಿ ಅಲ್ಲಿ ಎಲ್ಲಾದರೂ ಒಂದು ಮೈದಾನ ಇರುವುದನ್ನು ನೋಡಿಕೊಂಡು ಬಂದು ಆಮೇಲೆ 2-3 ವರ್ಷಗಳ ನಂತರ ಅಲ್ಲಿಗೆ ಹೋದರೆ ಅಲ್ಲಿ ಮೈದಾನ ಇತ್ತೋ ಏನು ಇತ್ತು ಎಂದು ನಿಮಗೇ ಗೊತ್ತಾಗುವುದಿಲ್ಲ. ಇಂತಹ ಪರಿಸ್ಥಿತಿ ಇಲ್ಲಿ ನಡೆಯುತ್ತಾ ಇದೆ. ಈ ಕಾರಣದಿಂದ ಕೆಲವು ಕಡೆ ತೊಂದರೆಗಳು ಆಗುತ್ತಾ ಇದೆಯೇ ಹೊರತು ಹೊಂದಾಣಿಕೆಯ ಕೊರತೆ ಎಂದು ಹೇಳುವ ಪರಿಸ್ಥಿತಿ ಇಲ್ಲವೆಂದು ನಾನು ಭರವಸೆಯಿಂದ ತಮಗೆ ಹೇಳುತ್ತೇನೆ. ಇನ್ನು ಹೌಸಿಂಗ್‌ಬೋರ್ಡ್ ಮತ್ತು ಬಿ.ಡಿ.ಎ. ಇವರುಗಳು ಮನೆಗಳನ್ನು ಕಟ್ಟುವ ವಿಚಾರದಲ್ಲಿ ತಾವು ಹೇಳಿದ್ದೀರಿ. ಒಬ್ಬ ಮಾನ್ಯಸದಸ್ಯರ ಅಭಿಪ್ರಾಯದಲ್ಲಿ ಈ ಕೆಲಸವನ್ನು ಬಿ.ಡಿ.ಎ ಅವರು ಮಾಡುವುದರಿಂದ ಬಹಳ ಓವರ್‌ಲ್ಯಾಪ್ ಆಗುವುದು ಎಂದು ಹೇಳಿದ್ದಾರೆ. ಮಾನ್ಯ ಶಾಮಣ್ಣನವರ ಅಭಿಪ್ರಾಯದಲ್ಲಿ ಮನೆಗಳನ್ನು ಅವರೂ ಕಟ್ಟಲಿ, ಇವರೂ ಕಟ್ಟಲಿ ಎಂದು ಅವರು ಹೇಳಿದ್ದಾರೆ. ಈ ಆಕ್ಟಿನ 62ನೇ ಸೆಕ್ಷನ್‌ನಲ್ಲಿ ಹೌಸಿಂಗ್ ಬೋರ್ಡ್ ಮನೆ ಕಟ್ಟುವ ಹಾಗೆ ಇಲ್ಲ ಎಂದು ಮಾಡಿಬಿಟ್ಟಿದೆ. ಇಲ್ಲಿ ಬಂದಿರುವ ಸಮಸ್ಯೆ ಏನೆಂದರೆ ಕೆಲವು ಮನೆಗಳನ್ನು ಹೌಸಿಂಗ್‌ಬೋರ್ಡ್‌ನವರು ಕಟ್ಟಿಬಿಟ್ಟಿದ್ದಾರೆ. ಈ ಮನೆಗಳನ್ನು ಅರ್ಧದಲ್ಲೆ ಬಿಟ್ಟು ಹೋಗಬೇಕೋ ಅಥವಾ ಯಾರಿಗಾದರೂ ಕೊಡಬೇಕೊ ಎಂದು ಸಮಸ್ಯೆ ಬಂದಾಗ "ನೀವು ಮನೆ ಕಟ್ಟುವುದನ್ನು ಮುಂದುವರಿಸಿ, ಇದರ ಬಗ್ಗೆ ಈ ಒಂದು ಅಮೆಂಡ್‌ಮೆಂಟಿನ್ನು ತಂದು ಕವರ್ ಮಾಡಬಹುದು" ಎಂದು ಹೇಳಿದಾಗ ಅದನ್ನು ಅವರು ಮುಂದುವರಿಸುತ್ತಿದ್ದಾರೆ. ನಾವು ಅದನ್ನು ಬಿಟ್ಟುಬಿಟ್ಟು ಹೇಗೆ ಕೂತುಕೊಳ್ಳುವುದು? ನಾವು ಅಮೆಂಡ್‌ಮೆಂಟ್ ತಂದಿರುವ ಪ್ರಕಾರ ಅವರು ಆ ಕೆಲಸವನ್ನು ಮುಂದುವರಿಸಲು ಸಹಾಯಕವಾಗಿದೆ. ಹೌಸಿಂಗ್ ಬೋರ್ಡ್‌ಗೆ ಮನೆ ಕಟ್ಟುವುದಕ್ಕೆ ಅವಕಾಶ ಕೊಡುವುದು ತಪ್ಪಲ್ಲ. ಈ ಪ್ಲಾನ್ಸ್ ಲೇಔಟನ್ನು ಬಿ.ಡಿ.ಎ ಅವರೇ ಮಾಡತಕ್ಕಂಥಾದ್ದು ಇದೆ. ಅದನ್ನು ಈ ಹೌಸಿಂಗ್‌ಬೋರ್ಡ್‌ನವರು ಮಾಡತಕ್ಕಂಥ ಪ್ರಶ್ನೆ ಇಲ್ಲ. ಆದರೆ ಅವರು ನಾವು ಮಾಡತ್ತೇವೆ ಕೊಡಿ ಎಂದು ಹೇಳಿದಾಗ ಅವರಿಗೆ ಕೊಡಬಹುದು ಆದರೂ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಇದನ್ನು ಬಿ.ಡಿ.ಎ ಅವರಿಗೇ ಕೊಡಬೇಕು. ಇದರಲ್ಲಿ ಹೌಸಿಂಗ್ ಬೋರ್ಡ್‌ನವರೇ ಕಟ್ಟುವಂತ ಸಂದರ್ಭ ಬಂದಾಗ ಅವರಿಗೆ ಹೇಳಬಹುದು. ಹೊಂದಾಣಿಕೆಯು ಕೊರತೆ ಬರಬಾರದು ಎಂಬ ದೃಷ್ಟಿಯಿಂದ ಈ ಅಮೆಂಡ್‌ಮೆಂಟನ್ನು ತಂದಿರತಕ್ಕಂಥಾದ್ದು ಇದೆ. ಶ್ರೀಮಾನ್ ನಾಯ್ಡು ಅವರು ಬೆಂಗಳೂರಿನ ಸಮಸ್ಯೆ ಬಹಳ ಇದೆ ಎಂದು ಹೇಳುತ್ತಿದ್ದರು ನಾನು ಹೇಳುತ್ತೇನೆ ಈ ಬೆಂಗಳೂರಿನ ಸಮಸ್ಯೆಯನ್ನು ಬಿಟ್ಟು ಬೆಂಗಳೂರಿನ ಹೊರಗಡೆ ಏನೂ ಸಮಸ್ಯೆಗಳು ಇಲ್ಲ ಎಂದು ಅವರ ಭಾವನೆಯಾಗಿರಬಹುದು. ಬೆಂಗಳೂರಿನ ಸಮಸ್ಯೆಯನ್ನು ಬಗೆಹರಿಸುವಲ್ಲಿ ತಮಗೆ ಇರುವಷ್ಟು ಕಾತೂಹಲ ನಮಗೂ ಇದೆ. ನಾವು ಇದನ್ನು ಉಪೇಕ್ಷೆ ಮಾಡುತ್ತಾ ಇಲ್ಲ. ನಾವು ಯಾವ ಸಮಸ್ಯೆಯನ್ನೂ ಉಪೇಕ್ಷೆ ಮಾಡುತ್ತಾ ಇಲ್ಲ ಎನ್ನುವುದಕ್ಕೆ ಬಹಳ ನಿದರ್ಶನಗಳು ಇವೆ. ನಮ್ಮ ಕಣ್ಣಿಗೆ ಕಾಣುವಂತ ನಿದರ್ಶನವೆಂದರೆ ಬೆಂಗಳೂರಿಗೆ ನೀರು ಸಪ್ಲೈ ಮಾಡುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಆದರೂ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಒದ್ದಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲಿ 20 ಗ್ಯಾಲನ್ ಅಷ್ಟು ನೀರನ್ನು ಒದಗಿಸುತ್ತಿದ್ದರೂ ನೀರು ಸಾಲದು ಎಂದು ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 2 ಸಾವಿರ ಚಿಲ್ಲರೆ ಟೌನ್‌ಗಳು ಈ ಒಂದು ಪರಿಸ್ಥಿತಿಯಲ್ಲಿ ಇವೆ ಇದರಲ್ಲಿ ಸಣ್ಣಸಣ್ಣ ಹಳ್ಳಿಗಳು ಮತ್ತು ದೊಡ್ಡದೊಡ್ಡ ಹಳ್ಳಿಗಳು ಇವೆ. ಈ ಸಮಸ್ಯೆ ಎಲ್ಲೆಲ್ಲೂ ಇದ್ದೇ ಇದೆ. ಎಲ್ಲೆಕ್ಕಿಂತ ಮುಖ್ಯವಾಗಿ ಈ ಮನೆಗಳ ಸಮಸ್ಯೆ ಬಹಳ ಉಲ್ಬಣವಾಗಿ ಬೆಳೆಯುತ್ತಿದೆ. ಪಟ್ಟಣಗಳಲ್ಲಿರುವ ಸರ್ಕಾರದ ಕೆಲಸಕಾರ್ಯಗಳು ಜಾಸ್ತಿಯಾಗಿವೆ, ಆದರೂ ಕೂಡ ಸರ್ಕಾರಿ ನೌಕರರಿಗೆ ಮನೆಗಳು ಸಿಕ್ಕುತ್ತಾ ಇಲ್ಲ. ಮನೆ ಇಲ್ಲದೇ ತೊಂದರೆ-ಪಡುತ್ತಾ ಇರತಕ್ಕಂಥವರು ವಿಪರೀತ ಜನರಿದ್ದಾರೆ. ಈ ಪಿಡುಬ್ಲ್ಯೂಡಿ ಇಲಾಖೆಯವರು ಹಿಂದೆ ಮನೆ ಕಟ್ಟಿದರೆ ಉಟ್ಟು ಇಲ್ಲದಿದ್ದರೆ ಮನೆ ಕಟ್ಟುವ ಪ್ರಶ್ನೆಯೇ ಇರಲಿಲ್ಲ. ಆಗ ಮನೆ ಕಟ್ಟುವ ಯಾವ ವಿಜನ್ಸಿಯವರೂ ಇರುತ್ತಾ ಇರಲಿಲ್ಲ. ಇತ್ತೀಚೆಗೆ ಸಣ್ಣಸಣ್ಣ ಪಟ್ಟಣಗಳಲ್ಲಿ ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಡತಕ್ಕಂಥ ಪದ್ಧತಿ ಕಡಿಮೆಯಾಗುತ್ತಾ ಇದೆ. ಒಂದು ಕಾಲದಲ್ಲಿ ಒಂದು ಮನೆಯನ್ನು ಕಟ್ಟಿದರೆ ಮನೆ ಬಾಡಿಗೆಯಿಂದ ಅನಲು, ಇಂಟರೆಸ್ಟ್ ಬರುವಂತೆ ರೀತಿಯಲ್ಲಿ ಕಟ್ಟುತ್ತಿದ್ದರು. ಈಗ ಮನೆ ಕಟ್ಟುವುದಕ್ಕೆ 18, 20 ಪರ್ಸೆಂಟ್ ಇಂಟರೆಸ್ಟ್ ಮೇಲೆ ಹಣವನ್ನು ತೆಗೆದುಕೊಂಡು ಮನೆಯನ್ನು ಕಟ್ಟಿದರೂ, ಅಷ್ಟೇ ದುಬಾರಿ ಬಾಡಿಗೆಗೆ ಮನೆಯನ್ನೂ ಕೊಟ್ಟರೂ ಇಂಟರೆಸ್ಟ್ ಗಿಟ್ಟುವುದಿಲ್ಲ ಎಂದೂ ಅನೇಕರು ಹೇಳುತ್ತಿದ್ದಾರೆ. ಇದರಿಂದ

ಬೆಂಗಳೂರು ನಗರದಲ್ಲೇ ಅಲ್ಲ, ಬೇರೆ ನಗರಗಳಲ್ಲೂ ಈ ಮನೆ ಕಟ್ಟುವ ಚಟುವಟಿಕೆ ಕಡಿಮೆಯಾಗಿದೆ ಆದ್ದರಿಂದ ಈ ಸರ್ಕಾರಿ ನೌಕರರಿಗೆ ಮನೆಗಳು ಸಿಕ್ಕುತ್ತಾ ಇಲ್ಲ. ಹೌಸಿಂಗ್‌ಬೋರ್ಡ್‌ನವರು ಅಂತಹ ಕಡೆ ಇತ್ತೀಚೆಗೆ ಮನೆಗಳನ್ನು ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ಲೆಕ್ಕವನ್ನು ತರಿಸಿ ನೋಡಿದರೆ ಬೆಂಗಳೂರು ನಗರದಲ್ಲಿ ಹೌಸಿಂಗ್‌ಬೋರ್ಡ್‌ನವರು ಸುಮಾರು 10 ವರ್ಷಗಳಲ್ಲಿ 15, 225 ಮನೆಗಳನ್ನು ಕಟ್ಟಿದ್ದಾರೆ. ಬೆಂಗಳೂರಿನ ಹೊರಗಡೆ 20 ನಾಮಿರ ಮನೆಗಳನ್ನು ಕಟ್ಟಿದ್ದಾರೆ. More than half the activities of the Housing Board are only in Bangalore.

ನಾವು ಕರ್ನಾಟಕ ಏಕ್ಟ್ ಮಾಡಿರುವ ಉದ್ದೇಶ ಬಿಡೀಕರ್ನಾಟಕ ರಾಜ್ಯಕ್ಕೆ ಈ ಮನೆ ಕಟ್ಟುವ ಕೆಲಸ ಆಗಬೇಕು ಎಂಬುದು ತಮಗೆ ತಿಳಿದಿವಿಷಯ. ಅದರೆ ತಾವು ಇನ್ನೊಂದು ವಿಷಯ ತಿಳಿದುಕೊಳ್ಳಬೇಕು ಈ ಹೌಸಿಂಗ್ ಬೋರ್ಡಿಗೆ ದುಡ್ಡು ಎಲ್ಲಿಂದ ಬರುತ್ತದೆ? ಎಲ್ಲದಕ್ಕೂ ಒಂದು ಲಿಮಿಟ್ ಇದೆ ಆದ್ದರಿಂದ ಸಾಧ್ಯವಾದಷ್ಟು ನಮ್ಮ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಇತ್ತೀಚೆಗೆ ಒಂದು ಲಕ್ಷ ಕ್ಕಿಂತ ಹೆಚ್ಚಿನ ಪ್ರಜಾಸಂಖ್ಯೆ ಇರತಕ್ಕಂಥ ಪಟ್ಟಣಗಳಿಗೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಮಾಡ ಬೇಕೆಂದು ಏರ್ಪಾಡು ಮಾಡಿದ್ದೇವೆ, ಕೆಲವಾರು ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಇಪ್ಪು ಪ್ರಕಾರಂ ಆಗಿವೆ ಅಲ್ಲಿ ಮನೆ ಕಟ್ಟತಕ್ಕಂಥಾದ್ದು ಕಡಿಮೆ ಇರುವುದರಿಂದ ಹೌಸಿಂಗ್ ಬೋರ್ಡಿನವರು ಅದರ ಕಡೆಗೆ ಹೆಚ್ಚು ಗಮನ ಹರಿಸಲಿ ಎನ್ನುವ ಉದ್ದೇಶ. ಆದರೆ ಈ ಹೌಸಿಂಗ್ ಬೋರ್ಡಿನವರು ನಗರದಲ್ಲಿ ಮನೆ ಕಟ್ಟುವ ಕೆಲಸ ಮಾಡಬೇಕಾದರೆ ಅವರಿಗೆ ಫಂಡ್ಸ್ ಎಲ್ಲಿ ಬರುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ಸ್ಪೆಷರ್ ಸೆಸ್ ಮುಖಾಂತರ ಅವಕ್ಕೆ ಅವಕಾಶ ಮಾಡ ಬಾರದೇ ?

ಶ್ರೀ ಡಿ, ದೇವರಾಜ್ ಅರಸ್.—ಯಾವ ರೀತಿ ಮಾಡಬೇಕೋ ನೋಡೋಣ. ನಮ್ಮ ಬೆಂಗಳೂರಿನ ಸಮಸ್ಯೆ ಬಗ್ಗೆ ಬಹಳ ಹೇಳಿದ್ದಾರೆ. ಇವೆಲ್ಲವೂ ಸರ್ಕಾರದ ಗಮನದಲ್ಲಿ ಇಲ್ಲವೆಂದು ದಯಮಾಡಿ ಯಾರು ತಿಳಿಯಬಾರದು. ಇನ್ನು ಸಮನ್ವಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡಿದ್ದೇವೆ. ಮನೆಗಳನ್ನು ಕಟ್ಟುವಾಗ ನಗರದ ಸೌಂದರ್ಯ, ಮತ್ತು ಆಸ್ಪತ್ರೆ ಸ್ಕೂಲು ಕಟ್ಟುವ ಹಾಗೂ ಪಾರ್ಕುಗಳ ಬಗ್ಗೆಯೂ ಸರ್ಕಾರ ಗಮನ ಕೊಡಬೇಕು ಎಂದು ಹೇಳಿದಾರೆ. ಇದು ಸೂಕ್ತವಾದ ಸಲಹೆ. ಸರ್ಕಾರವೂ ಅದೇ ದಾರಿಯಲ್ಲಿ ಚಿಂತನೆ ಮಾಡುತ್ತಾ ಇದೆ.

ಇನ್ನೊಂದು ಅಂಶ ಏನೆಂದರೆ ಈ ಬಿ.ಡಿ.ಎ. ವ್ಯಾಪ್ತಿಯೊಳಗೆ ಬರತಕ್ಕಂಥ ಭೂಮಿಯನ್ನು ಯಾವ ರೀತಿ ಉಪಯೋಗ ಮಾಡಬೇಕು ಎಂಬುದಕ್ಕೆ ಒಂದು ಹೈ ಪವರ್ ಕಮಿಟಿ ಮಾಡಿ ಅದು ಸಲಹೆ ಮಾಡಿದಂತೆ ಮಾಡಬೇಕೆನ್ನುವುದೂ ಉದ್ದೇಶ ಇಟ್ಟುಕೊಂಡಿದ್ದೇವೆ ಅದನ್ನು ಬಿಟ್ಟು ಇದನ್ನು ಅವರಿಗೆ ಕೊಡಿ ಇದನ್ನು ಇವರಿಗೆ ಕೊಡಿ ಎಂದು ನಾವು ಹೇಳುವ ಉದ್ದೇಶವಿಲ್ಲ, I entirely agree with you. I know that. That is why, we don't want to leave this to the whims and fancies of some individual Officer this man or that man. We want to see that these things more on certain norms and principles which we are now evolving, Of course my intention is not to allow such haphazard way of dealings.

ಶ್ರೀ ಟಿ. ಆರ್. ತಾಮಣ್ಣ.—ಹಳೆ ಸಿಟಿ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ತಮಗೇ ಗೊತ್ತು ಬಿ ಡಿ.ಎ. ಸಂಸ್ಥೆ ಬಂದು ಎಷ್ಟು ದಿವಸ ಆಯಿತು ಎಂದು It has teething troubles. ಒಂದೊಂದಾಗಿ ಪರಿಹಾರ ಮಾಡೋಣ. ಒಂದು ಉದಾಹರಣೆ ಹೇಳಬೇಕಾದರೆ ಯಾರಿಗೆ ಸೈಟು ಇಲ್ಲವೋ ಅವರಿಗೆಲ್ಲಾ ಸೈಟ್ ಕೊಡಬೇಕು ಎಂದು ನಮ್ಮ ಆಸೆ. ಆದರೆ ಮುಳ್ಳೆ ಮುಳ್ಳೆ ಏನೋ ತೊಂದರೆ ಬಂತು. ಅಕ್ವಿಜಿಷನ್ ಮಾಡುವ ಪ್ರಶ್ನೆ ಬಂದಾಗ ತಮಗೆ ಗೊತ್ತಿದೆ, ಇದರ ಒಂದು ಚರಿತ್ರೆ ಕೆಲವರು ಇವತ್ತಿಗಿದ್ದಹಾಗೆ ಲಕ್ಷಾಧಿಕಾರಿ ಯಾಗಿದ್ದಾರೆ. ನಮ್ಮ ಬೆಂಗಳೂರು ನಗರದ ಸುತ್ತ ಮುತ್ತ ಒಂದು ಮೈಲಿಯಲ್ಲಿ ಅನೇಕ ಹಳ್ಳಿಗಳು

ಇದ್ದವು. ಆ ಹಳ್ಳಿಗಳಲ್ಲಿ ಬಡವನ ಜಮೀನು ಇದ್ದು, ಈ ಬಿ.ಡಿ.ಎ. ಬರುತ್ತದೆ ಎಂದು ಗೊತ್ತಾದ ಕೂಡಲೇ ಹಳ್ಳಿಯ ರೈತನಿಂದ ಕಡಿಮೆ ಬೆಲೆಗೆ ಜಮೀನನ್ನು ಕೊಂಡು ಅದನ್ನು ಹೆಚ್ಚಿನ ಬೆಲೆಗೆ ಮಾರಿಕೊಂಡಿದ್ದಾರೆ. ನೇರವಾಗಿ ರೈತನಿಗೆ ಹಣ ಸಿಕ್ಕುವ ಅವಕಾಶವೇ ಇಲ್ಲವಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಕಂಟೋನ್‌ಮೆಂಟಿನಲ್ಲಿ ಒಂದು ಜಮೀನು ಅಕ್ವಿಜಿಷನ್ 2 ಲಕ್ಷಕ್ಕೆ ಪ್ರಾರಂಭವಾದದ್ದು ಕೊನೆಗೆ 23 ಲಕ್ಷಕ್ಕೆ ಹೋಗಿದೆ

ಶ್ರೀ ಡಿ. ದೇವರಾಜ್ ಅರಸ್.—ಒಂದು ಉದಾಹರಣೆ ಹೇಳಬೇಕೆಂದರೆ ನಮ್ಮ ರಾಜಾಜಿ ನಗರದಲ್ಲಿ ಒಬ್ಬರು ಸ್ವಲ್ಪ ಜಮೀನನ್ನು ಕೊಂಡುಕೊಂಡು ಅವೆಲ್ಲವನ್ನು ಪ್ಲಾಟ್ ಮಾಡಿದ್ದಾರೆ. ಅದಕ್ಕೆ ಕಾಂಪನ್‌ಷೇಷನ್ ಕೊಡುವ ವಿಷಯದಲ್ಲಿ ಗಲಾಟೆ ಬಂದಿದೆ. ಅದಕ್ಕೆ ಬಿ ಡಿ.ಎ.ಯವರು ಕೇಸ್ ಹಾಕಿದ್ದಾರೆ. ಅದರ ಮಾಲೀಕರು ಸಣ್ಣ ಸಣ್ಣ ಪ್ಲಾಟ್ ಮಾಡಿ ಅದರಿಂದ ಸುಮಾರು 5-6 ಲಕ್ಷ ರೂಪಾಯಿ ಮಾಡಿಕೊಂಡು ಸ್ಥಳವನ್ನು ಬಿಟ್ಟು ಹೋಗಿದ್ದಾರೆ. ಈ ರೀತಿ ರೆವಿನ್ಯೂ ಸೈಟ್ ಗಳನ್ನು ಮಾಡಿರುವುದು ಒಂದಲ್ಲ ಎರಡಲ್ಲ. ಈ ರೀತಿ ಟ್ರಸ್ಟ್ ಬೋರ್ಡಿನವರು ಯಾವುದಾದರೂ ಏರಿಯಾದಲ್ಲಿ ಜಮೀನನ್ನು ಅಕ್ವೈರ್ ಮಾಡುತ್ತಾರೆಂದು ಗೊತ್ತಾದರೆ ಕೂಡಲೇ ರೆವಿನ್ಯೂ ಜಮೀನನ್ನು ಕಡಿಮೆ ಬೆಲೆಗೆ ತಗೆದುಕೊಂಡು ಅದಕ್ಕೆ ಎಕರೆಗೆ 35, 50 ಸಾವಿರ ಅದಕ್ಕೂ ಹೆಚ್ಚು ಎಂದರೆ ಲಕ್ಷ ರೂಪಾಯಿಯವರೆಗೂ ಕಾಂಪನ್‌ಸೇಷನ್ ತೆಗೆದುಕೊಂಡಿದ್ದಾರೆ. ಇದೇ ರೀತಿ ಕೆಲವು ಕೇಸುಗಳು ಕೋರ್ಟಿಗೆ ಹೋದಾಗ, ಹೈಕೋರ್ಟ್‌ನಲ್ಲಿ ನಮ್ಮ ಸರ್ಕಾರಕ್ಕೆ ಬಹಳ ಸಹಾಯ ಮಾಡಿದ್ದಾರೆ, ಜಾಸ್ತಿ ಹಣ ಕೊಡಕೂಡದೆಂದು ತಪ್ಪಿಸಿದ್ದಾರೆ. ಇಷ್ಟೊಂದು ಹಣ ಕೊಡುವುದು ಸರಿಯಲ್ಲವೆಂದು ಹೇಳಿದ್ದಾರೆ. ಇಂತಹ ಪ್ರಕರಣಗಳು ಬಹಳಷ್ಟು ನಡೆದಿವೆ. ಬೆಂಗಳೂರು ನಗರದಲ್ಲಿ ಸುಮಾರು 10-15 ವರ್ಷಗಳಿಂದ ಅಕ್ವೈರ್ ಆದ ಜಮೀನುಗಳಲ್ಲಿ ಜಮೀನು ಇದ್ದವರಿಗಿಂತ ಇಲ್ಲದೆ ಇದ್ದವರು ಕಡಿಮೆ ಬೆಲೆಯಲ್ಲಿ ಕೊಂಡು ಟ್ರಸ್ಟ್ ಬೋರ್ಡಿಗೆ ಅಕ್ವೈರ್ ಮಾಡಿಸಿ ಚೆನ್ನಾಗಿ ದುಡ್ಡು ಮಾಡಿಕೊಂಡಿದ್ದಾರೆ. ಇದನ್ನೆಲ್ಲಾ ಬಿ.ಡಿ.ಎ. ಕೈಗೆ ತಗೆದುಕೊಂಡಮೇಲೆ ಹುಡುಕಿಸಿ ನೋಡಿದರೆ ಇದರ ಮೌಲ್ಯ ಸುಮಾರು ೭ ಕೋಟಿ ರೂಪಾಯಿ ಬೆಲೆ ಬಾಳುವಷ್ಟು ಹೋಗಿದೆ, ಇವತ್ತು ಅವನ್ನೆಲ್ಲಾ ಪೊಸಿಷನ್‌ಗೆ ತೆಗೆದುಕೊಂಡಿದ್ದೇವೆ. ಇನ್ನೂ ಹುಡುಕಿಸಿ ಎಂದು ಹೇಳಿದ್ದೇನೆ. ಒಂದು ಸಾರಿ ಹುಡುಕಿಸಿದರೆ ಸಿಕ್ಕುವುದು ಕಷ್ಟ. ಹೀಗೆ ಹಲವಾರು ಕಾರಣಗಳಿಂದ ಈ ಕೆಲಸ ನಿಧಾನ ಆಯಿತು. ಈಗ ಮತ್ತೆ ಏನಾಗುತ್ತದೆ ಎಂದರೆ 31 ಮಾರ್ಚ್ ಕೊನೆಯಾಗುತ್ತಾ ಬಂದಿದೆ, ಗೌವರ್ನಮೆಂಟ್ ಆಫ್ ಇಂಡಿಯಾದವರ ವ್ಯಾಪ್ತಿಗಿದರ ಮೇಲೆ ಇದೆ. ಇದನ್ನು ಮುಂದುವರಿಸುವುದು ಬಿಡುವುದು ಅವರ ಕೈಯಲ್ಲಿ ಇದೆ. ಮುಂದುವರಿಸಿಕೊಂಡು ಹೋಗಬೇಕೆಂದು ಅವರು ಹೇಳಿದರೆ ಇದನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಹಲವಾರು ಕಾರಣಗಳಿಂದ ಸೈಟ್ ಗಳನ್ನು ಹಂಚುವುದರಲ್ಲಿ ಸ್ವಲ್ಪ ತಡವಾಗಿದೆ ಅದರ ಬಗ್ಗೆ ತೀವ್ರ ಗಮನವನ್ನು ಹರಿಸುತ್ತೇವೆಂದು ಮಾನ್ಯ ಸದಸ್ಯರ ಅವಗಾಹನೆಗೆ ತರಬಯಸುತ್ತೇನೆ. ಇನ್ನು ಮಾನ್ಯ ಸದಸ್ಯರುಗಳು ಹೇಳಿರುವಂಥ ಅನೇಕ ವಿಷಯುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡುತ್ತೇವೆಂದು ತಿಳಿಸಿ, ಮೆಂಬರ್‌ಷಿಪ್ ಬಗ್ಗೆ, ಒಂದು ಅಮೆಂಡ್‌ಮೆಂಟ್‌ನ್ನು ಮೂವ್ ಮಾಡುವ ಬಗ್ಗೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

MADAM SPEAKER.—I will put the consideration Motion to the vote of the House.

The question is :

"That the Bangalore Development Authority (Amendment) Bill, 1977 as passed by the Legislative Council be taken into consideration."

The Motin was adopted

CLAUSE-2

MADAM SPEAKER.—There are amendments to Clause 2 by the Chief Minister. The Chief Minister may move his amendment.

SRI D. DEVARAJ URS.—I beg to move the following amendment to sub-clause (ii) of Clause 2, I beg to move :

"That for sub-clause (ii), the following sub-clause shall be substituted, namely :—

"(ii) for clause (h) and (k) the following clauses shall be substituted namely :—

(h) four others of whom one shall represent the labour ;

(k) a representative of the Karnataka State Road Transport Corporation."

MADAM SPEAKER.—Amendment is moved. I will put it to the vote.

*** Sub-clause of clause 2 is consequential amendment being the change in the serial number in the clause.

The question is :

"That for sub-clause (ii), the following sub-clause shall be substituted, namely :

(ii) for clause (h) and (k) the following clauses shall be substituted namely :

(h) four others of whom one shall represent the labour :

(k) a representative of the Karnataka State Road Transport Corporation."

The amendment was adopted

MADAM SPEAKER.—I will put the clause to the vote of the House. The question is :

"That clause 2 as amended do stand part of the Bill."

The motion was adopted

Clause 2 as amended was added to the Bill,

CLAUSES-3 to 5

MADAM SPEAKER.—The question is :

"That clauses 3 to 5, both inclusive do stand part of the Bill."

The motion was adopted

Clauses 3-5 both inclusive were added to the Bill.

CLAUSE 1 Etc.

MADAM SPEAKER.—The question is :

"That clause 1, the Long Title the Preamble and the Enacting Formula do stand part of she Bill.'!

The motion was adopted

Clause 1, the Long Title. the Preamble and the Enacting Formula were added to the Bill.

Motion to pass

SRI D. DEVARAJ URS.—I beg to move :

"That the Bangalore Development Authority (Amendment) Bill, 1977, as passed by the Legislative Council and as amended, be passed".

MADAM SPEAKER.—The question is :

"That the Bangalore Development Authority (Amendment) Bill 1977, as passed by the Legislative Council and. as amended. be passed."

The Motion was passed the Bill was passed as amended

MADAM SPEAKER.—The house will adjourn now and meet at 9-00 A.M. tomorrow.

The house adjourned at Twenty, five minutes past Five of the Clock to meet at Nine of the Clock on Friday the 1st April 1977.